# 1 ರಿಂದ 5 ನೇ ತರಗತಿಗಳಿಗೆ ಬೋಧನಾ ಕಲಿಕಾ ವಿಧಾನ ಮಾರ್ಗಸೂಚಿ (ಕಲಿನಲಿ)

## 2021–2022

## ವಿಷಯ : ಪರಿಸರ ಅಧ್ಯಯನ

- **1 ರಿಂದ 5 ನೇ ತರಗತಿಗಳಿಗೆ 10 ದಿನಗಳಿಗೆ ಶಾಲಾ ಸಿದ್ದತಾ ಚಟುವಟಿಕೆಗಳು**
- **1 ರಿಂದ 5 ನೇ ತರಗತಿಗಳಿಗೆ ಶೈಕ್ಷಣಿಕ ಮಾರ್ಗಸೂಚಿ**

ಶಿಕ್ಷಕರಿಗೆ ಸೂಚನೆಗಳು:

- ಕೋವಿಡ್–19ರ ಕಾರಣದಿಂದ 2021–22ನೇ ಶೈಕ್ಷಣಿಕ ಸಾಲಿನಲ್ಲಿ ಭೌತಿಕ ತರಗತಿಗಳು ಆರಂಭವಾಗಲು ವಿಳಂಬವಾಗಿದ್ದು, ಮಕ್ಕಳಿಗೆ ಕಲಿಯುವ/ ನೇರವಾಗಿ ಕಲಿಕೆಯಲ್ಲಿ ತೊಡಗುವ ಅವಕಾಶಗಳ ಕೊರತೆಯಾಗಿದೆ. ಪುನಃ ಮಕ್ಕಳನ್ನು ಶಾಲಾ ವಾತಾವರಣಕ್ಕೆ ಹೊಂದಿಸುವುದು ಹಾಗು ಕಲಿಕೆಯಲ್ಲಿ ಅವರನ್ನು ಸಂತಸದಾಯಕವಾಗಿ ತೊಡಗಿಸುವ ಸವಾಲು ನಮ್ಮೆಲ್ಲರಿಗೂ ಎದುರಾಗಿದೆ. ಲಭ್ಯವಿರುವ ಕಲಿಕಾ ಸಮಯವನ್ನು ಅತ್ಯುತ್ತಮವಾಗಿ ಹಾಗು ಪರಿಣಾಮಕಾರಿಯಾಗಿ ಬಳಸುವ ಮೂಲಕ ಮಕ್ಕಳಲ್ಲಿ ಗುಣಾತ್ಮಕ ಕಲಿಕೆಯನ್ನುಂಟು ಮಾಡಲು ಬುನಾದಿ ಕಲಿವಿನ ಫಲಗಳನ್ನು ನಿಗದಿ ಮಾಡಲಾಗಿದೆ. ಲಭ್ಯ ಅವಧಿಗಳನ್ನು ಹೇಗೆ ಆಯೋಜಿಸಬೇಕು ಎಂಬುದರ ಸಂಪೂರ್ಣ ಚಿತ್ರಣವನ್ನು ಡಿ.ಎಸ್.ಇ.ಆರ್.ಟಿ. ನೀಡಿರುವ ದಿ: 22/10/2021 ರ ಸುತ್ತೋಲೆಯಲ್ಲಿ ನೀಡಲಾಗಿದೆ.
- ಭೌತಿಕವಾಗಿ ತರಗತಿಗಳು ಆರಂಭವಾದ ಮೊದಲ 10 ದಿನಗಳು ಮಕ್ಕಳು ಶಾಲಾ ವಾತಾವರಣಕ್ಕೆ ಹೊಂದಿಕೊಳ್ಳಲು ಸಹಕಾರಿಯಾದ ವಿವಿಧ ರೀತಿಯ ಆಕರ್ಷಕ/ಪೂರಕ ಚಟುವಟಿಕೆಗಳನ್ನು ಸಿದ್ಧಪಡಿಸಿ ನೀಡಲಾಗಿದೆ. ಅವುಗಳಲ್ಲಿ ತಮ್ಮ ತರಗತಿಗೆ ಅನುಕೂಲವಾಗುವಂತಹ ಅಥವಾ ಇತರೆ ಯಾವುದೇ ಪೂರಕ ಚಟುವಟಿಕೆಗಳನ್ನು ಶಿಕ್ಷಕರು ಆಯೋಜಿಸುವುದು.
- 11ನೇ ದಿನದಿಂದ 40ನೇ ದಿನದವರೆಗೆ , 41ನೇ ದಿನದಿಂದ 90ನೇ ದಿನದವರೆಗೆ ಮತ್ತು 91ನೇ ದಿನದಿಂದ ನಿರೀಕ್ಷಿತ ಕಲಿಕಾ ಫಲಗಳನ್ನು ಗಳಿಸಲು ದಿ: 22/10/2021ರ ಸುತ್ತೋಲೆಯ ಮಾರ್ಗಸೂಚಿಯಂತೆ ಕಲಿಕಾ ಪ್ರಕ್ರಿಯೆ ನಡೆಸುವುದು.
- ಪರಿಸರ ಅಧ್ಯಯನ ವಿಷಯವು ಮಕ್ಕಳ ಪರಿಸರ ಜ್ಞಾನವನ್ನು ತಮ್ಮ ದಿನನಿತ್ಯದ ಆಗುಹೋಗುಗಳಿಗೆ ಅನ್ವಯಿಸುವ ಸಾಮರ್ಥವನ್ನು ಬೆಳೆಸುವ ಪ್ರಯತ್ನವನ್ನು ಮಾಡುವುದರಿಂದ, ಲಭ್ಯವಿರುವ ಕಲಿಕಾ ದಿನಗಳಲ್ಲಿ ಮಗು ಈಗಾಗಲೇ ಗಳಿಸಿರುವ ಪರಿಸರ ಜ್ಞಾನದ ವ್ಯಾಪ್ತಿಯನ್ನು ಹೆಚ್ಚಿಸುತ್ತಾ, ಹಲವು ಮೂಲಭೂತ ಪರಿಕಲ್ಪನೆಗಳನ್ನು ಬೆಳೆಸುವ ಪ್ರಯತ್ನವನ್ನು ಈ ಕಲಿಕಾ ಪ್ಯಾಕೇಜ್‌ನಲ್ಲಿ ಮಾಡಲಾಗಿದೆ. 1ರಿಂದ 5ನೇ ತರಗತಿಯ ಪರಿಸರ ಅಧ್ಯಯನ ವಿಷಯದಲ್ಲಿ ಕುಟುಂಬ ಮತ್ತು ಸ್ನೇಹಿತರು, ಆಹಾರ, ವಸತಿ, ನೀರು, ಪ್ರಯಾಣ, ನಾವು ಮಾಡುವ ಕೆಲಸಗಳು, ನೈರ್ಮಲ್ಯ ಮತ್ತು ಸುರಕ್ಷತೆ ಹಾಗು ನಮ್ಮ ವಿಶ್ವ – ಇವು ಪ್ರಮುಖ ಕ್ಷೇತ್ರಗಳಾಗಿವೆ. ಪರಿಸರ ಅಧ್ಯಯನ ವಿಷಯದಲ್ಲಿ ಮಗು ಕಲಿಯಲೇಬೇಕಾದ ಬುನಾದಿ ಕಲಿಕಾ ಫಲಗಳನ್ನು ಈ ಎಲ್ಲಾ ಕ್ಷೇತ್ರಗಳಿಂದ ಆಯ್ಕೆ ಮಾಡಿಕೊಳ್ಳಲಾಗಿದೆ. ಕ್ಷೇತ್ರ ಭೇಟಿ, ವೀಕ್ಷಣೆ, ಪರಿಶೋಧನೆ, ವಿಶ್ಲೇಷಣೆ, ವರದಿ ಮುಂತಾದ ವೈಜ್ಞಾನಿಕ ಕ್ರಮಗಳನ್ನು ಅಳವಡಿಸಿಕೊಳ್ಳುವುದರೊಂದಿಗೆ, ಆಕರ್ಷಣೀಯ/ ಸಂತಸದಾಯಕ ಚಟುವಟಿಕೆಗಳ ಮೂಲಕ ಮಕ್ಕಳನ್ನು ಕಲಿಕೆಯಲ್ಲಿ ತೊಡಗಿಸುವ ಪ್ರಯತ್ನವನ್ನು ಸಲಹಾತ್ಮಕವಾಗಿ ನೀಡಲಾಗಿದೆ. ಇದರೊಂದಿಗೆ ತಮ್ಮ ಅನುಭವ, ತರಗತಿ ಸನ್ನಿವೇಶ ಹಾಗು ಲಭ್ಯ ಸಂಪನ್ಮೂಲಗಳಿಗೆ ಅನುಗುಣವಾಗಿ ಶಿಕ್ಷಕರು ತಮ್ಮದೇ ಆದ ಚಟುವಟಿಕೆಗಳನ್ನು ರೂಪಿಸಿ, ನಿರ್ದಿಷ್ಟ ಕಲಿಕ ಫಲಗಳನ್ನು ಸಾಧಿಸಬಹುದಾಗಿದೆ.
- ಪ್ರಾಥಮಿಕ ಹಂತದ ಮಕ್ಕಳಿಗೆ ಆರೋಗ್ಯ ಮತ್ತು ಸ್ವಚ್ಛತೆಯ ಅರಿವು ಅತ್ಯಗತ್ಯ ಅಂಶವಾಗಿದ್ದು, ಬುನಾದಿ ಕಲಿಕಾ ಫಲಗಳ ಕಲಿಕೆಯೊಂದಿಗೆ ಸ್ವಚ್ಛತಾ ಅಭ್ಯಾಸಗಳು/ ಆರೋಗ್ಯಕರ ಹವ್ಯಾಸಗಳನ್ನು ರೂಢಿಸಿಕೊಳ್ಳುವಂತೆ ಪ್ರೋತ್ಸಾಹ/ಮಾರ್ಗದರ್ಶನವನ್ನು ನೀಡುವುದು ಅಪೇಕ್ಷಣೀಯವಾಗಿದೆ.

# ಪರಿಸರ ಅಧ್ಯಯನ
## ತರಗತಿ: 1 ರಿಂದ 5
## ಪೂರ್ವಸಿದ್ಧತಾ ಚಟುವಟಿಕೆಗಳು
## (ಮೊದಲ 10 ದಿನಗಳು)

| ಕ್ರ.ಸಂ | ಚಟುವಟಿಕೆ | ಕಲಿಕಾ ಪ್ರಕ್ರಿಯೆ | ಆಕರಗಳು/ಸಂಪನ್ಮೂಲಗಳು |
|---|---|---|---|
| 1. | ಪರಿಸರ ಗೀತೆಗಳು | * ಸಣ್ಣ ಸಣ್ಣ ಪರಿಸರ ಗೀತೆಗಳನ್ನು ಅಭಿನಯದೊಂದಿಗೆ ಹೇಳಿಕೊಡುವುದು | 1ನೇ ತರಗತಿಯ ಪರಿಸರ ಅಧ್ಯಯನ ಪಠ್ಯಪುಸ್ತಕದ ಪುಟ ಸಂಖ್ಯೆ: 11, 26, 34 . (ಇದರೊಂದಿಗೆ ನಿಮಗೆ ತಿಳಿದಿರುವ ಗೀತೆಗಳನ್ನು ಕಲಿಸಿ) |
| 2 | ಚಿತ್ರ ನೋಡಿ ಹೇಳು | * ಮಕ್ಕಳು ಸಾಮಾನ್ಯವಾಗಿ ಗುರುತಿಸಬಹುದಾದ ಪ್ರಾಣಿ, ಪಕ್ಷಿ, ಸಸ್ಯ, ಹಣ್ಣು, ತರಕಾರಿ, ಹೂಗಳ ಚಿತ್ರಗಳನ್ನು/ ಮಾದರಿಗಳನ್ನು ತೋರಿಸಿ, ಮಕ್ಕಳಿಂದ ಹೇಳಿಸುವುದು. | 1ರಿಂದ 5ನೇ ತರಗತಿಯ ಪರಿಸರ ಅಧ್ಯಯನ ಪಠ್ಯಪುಸ್ತಕಗಳು, ಲಭ್ಯ ಚಾರ್ಟಗಳು, ಫ್ಲಾಷ್ ಕಾರ್ಡುಗಳು, ಮಾದರಿಗಳು ಇತ್ಯಾದಿ |
| 3 | ನನ್ನವರ ಪರಿಚಯ | * ಮಕ್ಕಳು ತಮ್ಮ ಕುಟುಂಬದ ಸದಸ್ಯರ ಹೆಸರು ಮತ್ತು ಸಂಬಂಧ ಹೇಳುವಂತೆ ಪ್ರೋತ್ಸಾಹಿಸುವುದು. ಮಗು ತನ್ನ ಮನೆಯ ಬಗ್ಗೆ ಹಾಗು ತನ್ನವರ ಬಗ್ಗೆ ಮಾತನಾಡಲು ಅವಕಾಶ ನೀಡುವುದು. | |
| 4 | ಕಥೆ ಹೇಳುವೆ | * ಪ್ರಾಣಿ, ಪಕ್ಷಿ, ಸಸ್ಯಗಳ ಕಥೆಗಳನ್ನು ಸರಳ ಹಾವಭಾವ, ಧ್ವನಿ ಏರಿಳಿತದೊಂದಿಗೆ ಆಕರ್ಷಣೀಯವಾಗಿ ಹೇಳುವುದು. | ಗ್ರಂಥಾಲಯದ ಪುಸ್ತಕಗಳು. ಚಿತ್ರಕಥಾ ಚಾರ್ಟುಗಳು, ಕಾಮಿಕ್ಸ್, ರೇಡಿಯೋ ಪಾಠಗಳು, ದೃಶ್ಯ ಮಾಧ್ಯಮಗಳು, ಶಿಕ್ಷಕರ ಸೃಜನಶೀಲ ಕಥೆಗಳು |
| 5 | ಆಟ ಆಡೋಣ | * ಮಕ್ಕಳಿಗೆ ತಿಳಿದಿರುವ ಆಟಗಳನ್ನು ಹೇಳಿಸಿ, ಎಲ್ಲರೂ ಆಡಬಹುದಾದ ಮತ್ತು ಮಕ್ಕಳು ಖುಷಿಯಾಗಿ ಭಾಗವಹಿಸುವ ಆಟಗಳನ್ನು ಆಡಿಸುವುದು. (ತರಗತಿಯ ಒಳಗೆ/ಹೊರಗೆ )<br>ಉದಾಹರಣೆ : ಚೌಕಾಬಾರ, ಅಚ್ಚೆಕಲ್ಲು, ಕೇರಂ, ಚೆಂಡಾಟ, ಕ್ರಿಕೆಟ್, ಕಣ್ಣಾ ಮುಚ್ಚಾಲೆ, ಟೋಪಿ ಬೇಕಾ ಟೋಪಿ, ಚೆಂಡು ಎಸೆತ ಇತ್ಯಾದಿ | 1ನೇ ತರಗತಿಯ ಪರಿಸರ ಅಧ್ಯಯನ ಪಠ್ಯಪುಸ್ತಕದ ಪುಟಸಂಖ್ಯೆ 26<br>ಸ್ಥಳೀಯ ಆಟಗಳು |
| 6 | ಚಿತ್ರ ಬರೆಯಿರಿ | *ಮಕ್ಕಳು ಸ್ವತಂತ್ರವಾಗಿ ಚಿತ್ರ ಬರೆಯಲು ಬೇಕಾದ ಹಾಳೆ, ಕ್ರೇಯಾನ್ಸ್ /ಬಣ್ಣದ ಪೆನ್ಸಿಲ್ ನೀಡಿ ಚಿತ್ರ ಬರೆಸುವುದು. ಮಕ್ಕಳು ತಮಗಿಷ್ಟವಾದ ಚಿತ್ರ ಬರೆಯಲು ಪ್ರೋತ್ಸಾಹಿಸುವುದು. ಬರೆದ ಚಿತ್ರಗಳಿಗೆ ಬಣ್ಣ ತುಂಬಲು ನೆರವಾಗುವುದು. | |

| | | | |
|---|---|---|---|
| 7 | ರೇಖಾಚಿತ್ರಗಳಿಗೆ ಬಣ್ಣ ತುಂಬಿ | * ರೇಖಾಚಿತ್ರದ ಹಾಳೆ ನೀಡಿ ಮಕ್ಕಳು ಬಣ್ಣ ತುಂಬಲು ಹೇಳುವುದು ಅಥವಾ ಪಠ್ಯಪುಸ್ತಕದ ರೇಖಾ ಚಿತ್ರಗಳಿಗೂ ಬಣ್ಣ ಹಾಕಿಸುವುದು. | 1 ಮತ್ತು 2 ನೇ ತರಗತಿ ಪರಿಸರ ಅಧ್ಯಯನ ಪಠ್ಯಪುಸ್ತಕಗಳು, ರೇಖಾ ಚಿತ್ರಗಳ ಪ್ರತಿಗಳು |
| 8 | ಪರಿಸರ ವೀಕ್ಷಣೆ | * ಶಾಲಾ ಆವರಣಕ್ಕೆ ಮಕ್ಕಳನ್ನು ಕರೆದುಕೊಂಡು ಹೋಗಿ, ಪರಿಸರವನ್ನು ವೀಕ್ಷಿಸಲು ಅವಕಾಶ ನೀಡುವುದು. ಅವರು ನೋಡಿದ ಗಿಡ, ಮರ, ಪ್ರಾಣಿ, ಪಕ್ಷಿ, ಕಟ್ಟಡ, ಮಣ್ಣು, ಕಲ್ಲು ಇತ್ಯಾದಿಗಳನ್ನು ಹೇಳಿಸಿ, ಅವುಗಳ ಉಪಯೋಗ/ಲಕ್ಷಣ/ರೂಪ ಇತ್ಯಾದಿ ಗುರುತಿಸಬಹುದಾದ ಅಂಶಗಳ ಬಗ್ಗೆ ಹೇಳಿಸುವುದು. | ಸ್ಥಳೀಯ ಪರಿಸರ |
| 9 | ಮೂಕಾಭಿನಯ | * ಒಂದು ಮಗು ಪ್ರಾಣಿಯಂತೆ/ವಾಹನದಂತೆ ಚಲಿಸುವ, ನೀರಿನ ಬಳಕೆಯ, ಸಿಹಿ/ ಕಹಿ/ ಖಾರ ಇತ್ಯಾದಿ ರುಚಿಯ ಮುಖಭಾವಗಳಂತಹ ಮೂಕಾಭಿನಯ ಮಾಡುವುದು. ಉಳಿದ ಮಕ್ಕಳು ಅದು ಏನು ಎಂದು ಊಹಿಸಿ ಹೇಳುವುದು. | 1ನೇ ತರಗತಿಯ ಪರಿಸರ ಅಧ್ಯಯನ ಪಠ್ಯಪುಸ್ತಕದ ಪುಟ ಸಂಖ್ಯೆ 50, 56, 3 ನೇ ತರಗತಿ ಪರಿಸರ ಅಧ್ಯಯನ ಪಠ್ಯಪುಸ್ತಕದ ಪುಟ 123,146,147 |
| 10 | ಸೃಜನಶೀಲ ಚಟುವಟಿಕೆಗಳು | ಬಣ್ಣ ಹಚ್ಚಿದ ಹೆಬ್ಬೆಟ್ಟಿನ ಚಿತ್ರ ರಚನೆ, ಬಣ್ಣ ಹಚ್ಚಿದ ದಾರದಿಂದ ಚಿತ್ರ ರಚನೆ, ಎಲೆಗಳಿಂದ ಚಿತ್ರ ರಚನೆ, ಬಣ್ಣದ ಕಾಗದದಿಂದ ಆಕೃತಿಗಳ ಮಾದರಿ (ಒರೆಗಾಮಿ) ರಚನೆ, ಗೊಂಬೆಗಳ ತಯಾರಿ, ಗ್ರೀಟಿಂಗ್ಸ್ ತಯಾರಿಕೆ ಹೀಗೆ ಹತ್ತಾರು ಸೃಜನಶೀಲ ಚಟುವಟಿಕೆಗಳನ್ನು ಮಕ್ಕಳ ಸಂಖ್ಯೆ, ಸಂಪನ್ಮೂಲಗಳ ಲಭ್ಯತೆಗನುಗುಣವಾಗಿ ಹಮ್ಮಿಕೊಳ್ಳುವುದು. | 2ನೇ ತರಗತಿಯ ಪರಿಸರ ಅಧ್ಯಯನ ಪಠ್ಯಪುಸ್ತಕದ ಪುಟ ಸಂಖ್ಯೆ 5 ಮತ್ತು 6 4ನೇ ತರಗತಿಯ ಪರಿಸರ ಅಧ್ಯಯನ ಪಠ್ಯಪುಸ್ತಕದ ಪುಟ ಸಂಖ್ಯೆ 207,208 ಮತ್ತು 209 |

## ತರಗತಿ– 1

ನಿರೀಕ್ಷಿತ ಕಲಿಕಾ ಫಲಗಳು :

1. ಸೂರ್ಯ, ಚಂದ್ರ, ನಕ್ಷತ್ರಗಳನ್ನು ಗುರುತಿಸುವರು.
2. ತನ್ನ ಸುತ್ತಮುತ್ತಲಿನ ಆಹಾರ ಪದಾರ್ಥಗಳನ್ನು ಗುರುತು ಹಿಡಿಯುವರು.
3. ದಿನನಿತ್ಯದಲ್ಲಿನ ನೀರಿನ ಉಪಯೋಗವನ್ನು ಗುರುತಿಸುವರು.
4. ತನ್ನ ಸುತ್ತಮುತ್ತಲಿನ ವಿವಿಧ ಸಾರಿಗೆ ಸಾಧನಗಳನ್ನು ಗುರುತಿಸುವರು.
5. ಆಹಾರ, ಉಡುಪು ಮತ್ತು ಆಶ್ರಯಗಳಂತಹ ದಿನನಿತ್ಯದ ಅಗತ್ಯಗಳನ್ನು ಪಟ್ಟಿ ಮಾಡುವರು.

| ಕ್ರ.ಸಂ | ಕಲಿಕಾಂಶ/ಶೀರ್ಷಿಕೆ | ಕಲಿಕಾ ಪ್ರಕ್ರಿಯೆ | ಸಾಧಿಸಬಹುದಾದ ಕಲಿಕಾ ಫಲ |
|---|---|---|---|
| 1. | ಆಹಾರ ಪದಾರ್ಥಗಳ ಗುರುತಿಸುವಿಕೆ | * ಆಹಾರ ಪದಾರ್ಥಗಳಿಗೆ ಸಂಬಂಧಿಸಿದ ಹಾಡು ಹಾಡಿಸುವುದು. ಉದಾಹರಣೆ: 1ನೇ ತರಗತಿಯ ಪರಿಸರ ಅಧ್ಯಯನ ಪಠ್ಯಪುಸ್ತಕದ 34ನೇ ಪುಟ.<br>* ಆಹಾರ ಪದಾರ್ಥಗಳ ಚಿತ್ರ ತೋರಿಸಿ ಗುರುತಿಸಲು ಹೇಳುವುದು. ( 1ನೇ ತರಗತಿ ಪರಿಸರ ಅಧ್ಯಯನ ಪಠ್ಯಪುಸ್ತಕದ ಪುಟ ಸಂಖ್ಯೆ 27)<br>* ರೇಖಾ ಚಿತ್ರಗಳಿಗೆ ಬಣ್ಣ ತುಂಬಿಸಲು ಸೂಚಿಸುವುದು. ಪುಟ ಸಂಖ್ಯೆ: 32 ರಿಂದ 35 (ಇನ್ನಿತರ ಆಹಾರ ವಸ್ತುವಿಗೆ ಸಂಬಂಧಿಸಿದ ರೇಖಾಚಿತ್ರ ನೀಡಬಹುದು).<br>* ಮಕ್ಕಳು ಮನೆಯಲ್ಲಿ ಬಳಸುವ ಆಹಾರವನ್ನು ಹೇಳಿಸುವುದು.<br>* ಹಣ್ಣು, ತರಕಾರಿ, ಆಹಾರ ಪದಾರ್ಥಗಳನ್ನು ತರಗತಿಯಲ್ಲಿ ಪ್ರದರ್ಶಿಸಿ ಮಕ್ಕಳು ಗುರುತಿಸಿ, ಹೆಸರಿಸಲು ಪ್ರೋತ್ಸಾಹಿಸುವುದು.<br>* ಹಣ್ಣು, ತರಕಾರಿ ಮಾದರಿಗಳನ್ನು ಮಕ್ಕಳಿಗೆ ನೀಡಿ ಗುರುತಿಸುವಂತೆ ಮಾಡುವುದು.<br>* ಕೆಲವು ತರಕಾರಿ/ಹಣ್ಣುಗಳನ್ನು ಸೇವಿಸಿದಾಗ ಆಗುವ ರುಚಿಯ ಅನುಭವವನ್ನು ಅಭಿನಯಿಸಲು ಮಕ್ಕಳಿಗೆ ಹೇಳುವುದು. ಉದಾಹರಣೆ: ಮೆಣಸಿನ ಕಾಯಿ, ಮಾವಿನಕಾಯಿ, ಬಾಳೆಹಣ್ಣು ತಿಂದಾಗ ಪ್ರತಿಕ್ರಿಯೆಯ ಅಭಿನಯ<br>* ಆಹಾರ ಪದಾರ್ಥಗಳನ್ನು ಶಿಕ್ಷಕರು ತರಗತಿಯಲ್ಲಿ ಪ್ರದರ್ಶಿಸಿ, ಮಕ್ಕಳು ಗುರುತಿಸಲು ತಿಳಿಸುವುದು. | ತನ್ನ ಸುತ್ತಮುತ್ತಲಿನ ಆಹಾರ ಪದಾರ್ಥಗಳನ್ನು ಗುರುತು ಹಿಡಿಯುವರು |
| 2. | ನೀರು | * 1ನೇ ತರಗತಿ ಪಠ್ಯಪುಸ್ತಕದ ಪುಟ ಸಂಖ್ಯೆ 26ರಲ್ಲಿರುವ 'ಅಭಿನಯ ಮಾಡಿ ತೋರಿಸು' ಚಟುವಟಿಕೆಯನ್ನು ಸೂಚಿಸುವುದು.<br>* ಅದೇ ಪುಟದಲ್ಲಿರುವ ಹಾಡು ಹಾಡಿಸುವುದು.<br>* ಪುಟ ಸಂಖ್ಯೆ 23, 24ರಲ್ಲಿರುವ ಚಿತ್ರಗಳನ್ನು ತೋರಿಸಿ, ನೀರಿನ ಉಪಯೋಗಗಳನ್ನು ಹೇಳಿಸುವುದು.<br>* ವಿದ್ಯಾರ್ಥಿಗಳ ಮನೆಯಲ್ಲಿ ಯಾವ ಯಾವ ಕೆಲಸಗಳಿಗೆ ನೀರನ್ನು ಬಳಸುತ್ತಾರೆ ಎಂದು ಹೇಳಿಸುವುದು.<br>* ಮಕ್ಕಳಿಂದ ನೀರಿನ ಬಳಕೆಯ ಮೂಕಾಭಿನಯ ಮಾಡಿಸಿ, ಉಪಯೋಗ ಹೇಳಿಸುವುದು. | ದಿನನಿತ್ಯದಲ್ಲಿನ ನೀರಿನ ಉಪಯೋಗವನ್ನು ಗುರುತಿಸುವರು |
| 3. | ತನ್ನ ಸುತ್ತಮುತ್ತಲಿನ ವಿವಿಧ ಸಾರಿಗೆ ಸಾಧನಗಳನ್ನು ಗುರುತಿಸುವಿಕೆ. | * ಮಗು ತನ್ನ ಮನೆಯಲ್ಲಿರುವ ಸಾರಿಗೆ ಸಾಧನಗಳ ಹೆಸರನ್ನು ಹೇಳಿಸುವುದು.<br>* ಮಗುವಿಗೆ ವಿವಿಧ ಸಾರಿಗೆ ಸಾಧನಗಳ ಚಿತ್ರವನ್ನು ತೋರಿಸಿ ಗುರುತಿಸಲು ತಿಳಿಸುವುದು. (ಪುಟ ಸಂಖ್ಯೆ: 55)<br>* ಮಗು ವಿವಿಧ ಸಾರಿಗೆ ಸಾಧನಗಳ ಶಬ್ದಗಳನ್ನು ಅನುಕರಿಸಲು ಅವಕಾಶ ನೀಡುವುದು.<br>ಉದಾಹರಣೆ: ರೈಲು, ಸೈಕಲ್, ಸ್ಕೂಟರ್, ಬಸ್ಸು (ಪುಟ ಸಂಖ್ಯೆ : 56)<br>* ಮಗುವಿಗೆ ತಿಳಿದಿರುವ ವಾಹನಗಳ ಹೆಸರನ್ನು ಹೇಳಿಸುವುದು. | ತನ್ನ ಸುತ್ತಮುತ್ತಲಿನ ವಿವಿಧ ಸಾರಿಗೆ ಸಾಧನಗಳನ್ನು ಗುರುತಿಸುವರು. |

| | | | |
|---|---|---|---|
| | | * ಮಗು ಇಷ್ಟಪಡುವ  ವಾಹನದ ಹೆಸರನ್ನು ಹೇಳಿಸುವುದು.<br>* ಕಾಗದವನ್ನು ಮಡಚಿ ಕೆಲವು ಸಾರಿಗೆ ಸಾಧನಗಳನ್ನು ತಯಾರಿಸಲು ಕಲಿಸುವುದು.<br>ಉದಾಹರಣೆ: ದೋಣಿ (ಪುಟ ಸಂಖ್ಯೆ: 57)<br>* ಸಾರಿಗೆ ಸಾಧನಗಳ ಚಿತ್ರವನ್ನು ಸಂಗ್ರಹಿಸಲು ಸಹಾಯ ಮಾಡುವುದು.<br>* ಸಾರಿಗೆ ಸಾಧನಗಳ ಚಿತ್ರಗಳಿಗೆ ಬಣ್ಣ ಹಾಕಲು ತಿಳಿಸುವುದು. (ಪುಟ ಸಂಖ್ಯೆ: 58,59)<br>* ಕೆಲವು ವಾಹನಗಳ ಚಿತ್ರವನ್ನು ತೋರಿಸಿ, ಅವು ಹೇಗೆ ಶಬ್ದ ಮಾಡುತ್ತಾ ಚಲಿಸುತ್ತವೆ ಎಂಬುದನ್ನು ಅಭಿನಯ ಮಾಡಿಸುವುದು.<br>ಉದಾಹರಣೆ: ಬಸ್ಸು, ರೈಲು, ಸ್ಕೂಟರ್ ಇತ್ಯಾದಿ<br>* ಕೆಲವು ವಾಹನಗಳ ಚಿತ್ರವನ್ನು ತೋರಿಸಿ, ಅವು ಎಲ್ಲಿ ಚಲಿಸುತ್ತವೆ ಎನ್ನುವುದನ್ನು ಹೇಳಿಸುವುದು.<br>ಉದಾಹರಣೆ: ವಿಮಾನ ⟶ ಆಕಾಶ<br>ಬಸ್ಸು ⟶ ರಸ್ತೆ<br>* ಸಾರಿಗೆಗೆ ಸಂಬಂಧಿಸಿದ ಹಾಡನ್ನು ಹಾಡಿಸುವುದು. ( ಪುಟ ಸಂಖ್ಯೆ: 61)<br>ಈ ಕಲಿಕಾ ಫಲವನ್ನು ಸಾಧಿಸಲು ಆಡಿಯೋ ವೀಡಿಯೋ ಸಾಧನಗಳನ್ನು ಬಳಸಿಕೊಳ್ಳುವುದು. | |
| 4. | ಆಹಾರ, ಉಡುಪು ಮತ್ತು ಆಶ್ರಯ | * ಮಕ್ಕಳಿಗೆ ವಿವಿಧ ಆಹಾರ ಪದಾರ್ಥಗಳ ಚಿತ್ರವನ್ನು ತೋರಿಸಿ ಹೆಸರಿಸಲು ತಿಳಿಸುವುದು. (ಪುಟ ಸಂಖ್ಯೆ: 36)<br>* ಆಹಾರದ ಅವಶ್ಯಕತೆಗೆ ಸಂಬಂಧಿಸಿದ ಹಾಡನ್ನು ಮಕ್ಕಳಿಗೆ ಕಲಿಸುವುದು. (ಪುಟ ಸಂಖ್ಯೆ: 36)<br>* ಪುಟ ಸಂಖ್ಯೆ 37ರ ಸಹಾಯದಿಂದ ನಮಗೆ ಆಹಾರ ಏಕೆ ಬೇಕು ಎನ್ನುವುದನ್ನು ಅರ್ಥೈಸುವುದು.<br>* ವಿವಿಧ ಉಡುಪುಗಳ ಚಿತ್ರವನ್ನು ತೋರಿಸುವುದು.<br>* ಮಕ್ಕಳಿಗಿಷ್ಟವಾದ ಉಡುಪುಗಳ ಬಗ್ಗೆ ಹೇಳಿಸುವುದು.<br>* ಮಗುವಿಗೆ ಅವರ ಮನೆಯಲ್ಲಿರುವ ಸದಸ್ಯರ ಬಗ್ಗೆ ಹೇಳಲು ತಿಳಿಸುವುದು. (ಪುಟ ಸಂಖ್ಯೆ: 38)<br>* ತನ್ನ ಮನೆಯಲ್ಲಿರುವ ಕಿಟಕಿ, ಬಾಗಿಲುಗಳನ್ನು ಎಣಿಸಲು ಮಗುವಿಗೆ ತಿಳಿಸುವುದು. (ಪುಟ ಸಂಖ್ಯೆ: 39)<br>* ಮನೆಯ ಚಿತ್ರಕ್ಕೆ ಬಣ್ಣವನ್ನು ತುಂಬಿಸುವುದು. (ಪುಟ ಸಂಖ್ಯೆ: 41)<br>* ಮನೆಗೆ ಸಂಬಂಧಿಸಿದ ಹಾಡನ್ನು ಮಕ್ಕಳಿಗೆ ಅಭಿನಯದೊಂದಿಗೆ ಹೇಳಿಕೊಡುವುದು. (ಪುಟ ಸಂಖ್ಯೆ: 42) | ಆಹಾರ, ಉಡುಪು ಮತ್ತು ಆಶ್ರಯಗಳಂತಹ ದಿನನಿತ್ಯದ ಅಗತ್ಯಗಳನ್ನು ಪಟ್ಟಿ ಮಾಡುವರು |
| 5. | ಸೂರ್ಯ, ಚಂದ್ರ, ನಕ್ಷತ್ರ | * ಕಪ್ಪು ಹಲಗೆಯ ಮೇಲೆ ಸೂರ್ಯ, ಚಂದ್ರ, ನಕ್ಷತ್ರಗಳ ಚಿತ್ರ ಬರೆದು ಮಕ್ಕಳಿಂದ ಹೇಳಿಸುವುದು.<br>* ಪಠ್ಯಪುಸ್ತಕದ ಪುಟ ಸಂಖ್ಯೆ: 91 ರಲ್ಲಿರುವ ಚಿತ್ರಗಳನ್ನು ತೋರಿಸಿ ಮಕ್ಕಳಿಂದ ಹೆಸರು ಹೇಳಿಸುವುದು.<br>* ರಾತ್ರಿ ಮತ್ತು ಹಗಲಿನ ವೇಳೆ ಮಕ್ಕಳು ಆಕಾಶದಲ್ಲಿ ಏನೇನು ನೋಡುತ್ತಾರೆ ಎಂಬುದನ್ನು ಹೇಳಿಸುವುದು.<br>* ಸೂರ್ಯ, ಚಂದ್ರ, ನಕ್ಷತ್ರಗಳ ಚಿತ್ರ ಬರೆಸುವುದು.<br>* ಪಠ್ಯಪುಸ್ತಕದ ಪುಟ ಸಂಖ್ಯೆ: 94ರ ಆಟ, ಪುಟ ಸಂಖ್ಯೆ: 96ರ ಚುಕ್ಕೆ ಸೇರಿಸಿ, ಬಣ್ಣ ಹಾಕುವುದು ಹಾಗೂ 97ರ ಚಿತ್ರಗಳಿಗೆ ಬಣ್ಣ ಹಾಕುವ ಚಟುವಟಿಕೆಗಳನ್ನು ಮಾಡಿಸುವುದು.<br>* ಪುಟ ಸಂಖ್ಯೆ 95ರ ಹಾಡನ್ನು ಅಭಿನಯದೊಂದಿಗೆ ಹೇಳಿಕೊಡುವುದು. | ಸೂರ್ಯ, ಚಂದ್ರ, ನಕ್ಷತ್ರಗಳನ್ನು ಗುರುತಿಸುವರು |

## ತರಗತಿ– 2

ನಿರೀಕ್ಷಿತ ಕಲಿಕಾ ಫಲಗಳು :

1. ಕುಟುಂಬಗಳಲ್ಲಿ ಭಾಗವಹಿಸುವ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳ ಕುರಿತು ಮಾತನಾಡುವರು.
2. ಒಳಾಂಗಣ ಹಾಗೂ ಹೊರಾಂಗಣ ಆಟಗಳಲ್ಲಿ ಭಾಗವಹಿಸುವರು.
3. ತಮ್ಮ ಸುತ್ತಲಿನ ಪ್ರಾಣಿಗಳು ಮತ್ತು ಸಸ್ಯಗಳನ್ನು ಗುರುತಿಸುವರು.
4. ಸಸ್ಯಗಳನ್ನು ಅವುಗಳ ಎತ್ತರ, ಹೂಗಳು, ಬಣ್ಣ, ಎಲೆಗಳು ಮತ್ತು ಉಪಯೋಗಗಳನ್ನು ಆಧರಿಸಿ ಹೋಲಿಸುವರು.
5. ಹಸಿಯಾದ ಮತ್ತು ಬೇಯಿಸಿದ ತರಕಾರಿಗಳನ್ನು ಹೆಸರಿಸುವರು.
6. ನೀರಿನ ಅವಶ್ಯಕತೆ ಮತ್ತು ಮನೆಯ ಅಗತ್ಯತೆಯನ್ನು ಅರ್ಥಮಾಡಿಕೊಳ್ಳುವರು.

| ಕ್ರ.ಸಂ | ಕಲಿಕಾಂಶ/ಶೀರ್ಷಿಕೆ | ಕಲಿಕಾ ಪ್ರಕ್ರಿಯೆ | ಸಾಧಿಸಬಹುದಾದ ಕಲಿಕಾ ಫಲ |
|---|---|---|---|
| 1. | ಕುಟುಂಬದ ಕಾರ್ಯಕ್ರಮಗಳು | * ನಿಮ್ಮ ಮನೆಗೆ ಯಾವ ಸಂದರ್ಭಗಳಲ್ಲಿ/ಯಾವಾಗ ನೆಂಟರು ಬರುತ್ತಾರೆ ಎಂದು ಮಕ್ಕಳಿಗೆ ಪ್ರಶ್ನಿಸಿ ಚರ್ಚಿಸುವುದು.<br>* ಯಾವ ಯಾವ ಕಾರ್ಯಕ್ರಮಗಳಿಗೆ ಬಂಧುಗಳ/ನೆಂಟರ ಮನೆಗೆ ಹೋಗುತ್ತಾರೆ ಎಂಬುದನ್ನು ಮಕ್ಕಳಿಂದ ಹೇಳಿಸುವುದು.<br>* ಮಕ್ಕಳ ಮನೆಯಲ್ಲಿ ಮಾಡಿರುವ ಯಾವುದಾದರು ವಿಶೇಷ ಕಾರ್ಯಕ್ರಮಗಳ ಬಗ್ಗೆ ಹೇಳಿಸುವುದು.<br>* ಕಾರ್ಯಕ್ರಮದಲ್ಲಿ ಭಾಗವಹಿಸುವಾಗ ಆಗುವ ಸಂತೋಷ/ಪ್ರಯೋಜನದ ಬಗ್ಗೆ ಹೇಳಿಸುವುದು.<br>* 2ನೇ ತರಗತಿಯ ಪಾಠ: 13ರ 'ಹಬ್ಬ ಬಂತು ಹಬ್ಬ' ಪಾಠದ ಚಟುವಟಿಕೆಗಳನ್ನು ಮಾಡಿಸುವುದು.<br>* ಮಗು ತುಂಬಾ ಇಷ್ಟ ಪಡುವ ಕುಟುಂಬದ ಕಾರ್ಯಕ್ರಮದ ಬಗ್ಗೆ ಹೇಳಿಸುವುದು. | ಕುಟುಂಬಗಳಲ್ಲಿ ಭಾಗವಹಿಸುವ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳ ಕುರಿತು ಮಾತನಾಡುವರು |
| 2. | ಪ್ರಾಣಿಗಳು ಮತ್ತು ಸಸ್ಯಗಳು | * ತನ್ನ ಊರಿನಲ್ಲಿ ಕಂಡು ಬರುವ ಪ್ರಾಣಿ, ಪಕ್ಷಿಗಳ ಹೆಸರನ್ನು ಹೇಳಿಸುವುದು. (ಚಿತ್ರಗಳನ್ನು ತೋರಿಸಬಹುದು)<br>* 1ನೇ ತರಗತಿಯ ಪರಿಸರ ಅಧ್ಯಯನ ಪಠ್ಯಪುಸ್ತಕದ ಪುಟ ಸಂಖ್ಯೆ: 1 ಮತ್ತು 2ರಲ್ಲಿ ಇರುವ ಚಿತ್ರಗಳನ್ನು ತೋರಿಸಿ, ಮಕ್ಕಳಿಂದ ಹೆಸರು ಹೇಳಿಸುವುದು.<br>* ಮಗುವಿಗೆ ಪರಿಚಯವಿರುವ ಪಕ್ಷಿಗಳ ಹೆಸರನ್ನು ಹೇಳಿಸುವುದು.<br>* ಮಕ್ಕಳಿಗೆ ಪ್ರಾಣಿ, ಪಕ್ಷಿಗಳ ಚಿತ್ರ ಬಿಡಿಸಿ, ಬಣ್ಣ ಹಾಕಲು ಪ್ರೋತ್ಸಾಹಿಸುವುದು.<br>* 2ನೇ ತರಗತಿಯ ಪಾಠ: 1 ' ಪ್ರಾಣಿ ಪರಿಚಯ' ಮತ್ತು ಪಾಠ: 2 ' ಪ್ರಾಣಿ ಪಾಲನೆ' ಪಾಠಗಳಲ್ಲಿ ನೀಡಿರುವ ಚಟುವಟಿಕೆಗಳನ್ನು ಮಾಡುವುದು.<br>* ಪ್ರಾಣಿಗಳ ಕಥೆಗಳನ್ನು ಹೇಳುವುದು/ಹೇಳಿಸುವುದು.<br>* ಸಾಕು ಪ್ರಾಣಿ ಮತ್ತು ಕಾಡು ಪ್ರಾಣಿಗಳ ಚಿತ್ರಗಳನ್ನು ತೋರಿಸಿ, ಅದರಲ್ಲಿ ಸಾಕು ಪ್ರಾಣಿ ಮತ್ತು ಕಾಡು ಪ್ರಾಣಿ ಯಾವುದೆಂದು ಗುರುತಿಸಿ, ವಿಂಗಡಿಸಲು ಮಕ್ಕಳಿಗೆ ತಿಳಿಸುವುದು.<br>* ಮಕ್ಕಳನ್ನು ಗುಂಪುಗಳಾಗಿ ಮಾಡಿ ಗುಂಪುಗಳಿಗೆ ಪ್ರಾಣಿಗಳ ಪ್ಲಾಷ್ ಕಾರ್ಡುಗಳನ್ನು ನೀಡಿ, ಅವುಗಳನ್ನು ಕಾಡುಪ್ರಾಣಿ/ಸಾಕುಪ್ರಾಣಿ ಎಂದು ಗುರುತಿಸಿ, ವರ್ಗೀಕರಿಸಲು ತಿಳಿಸುವುದು<br>* ಪ್ರಾಣಿಗಳ ಹೆಸರುಗಳನ್ನೊಳಗೊಂಡ ಹಾಡು ಹಾಡಿಸುವುದು. | ತಮ್ಮ ಸುತ್ತಲಿನ ಪ್ರಾಣಿಗಳು ಮತ್ತು ಸಸ್ಯಗಳನ್ನು ಗುರುತಿಸುವರು |

| | | | |
|---|---|---|---|
| 3. | ಸಸ್ಯಗಳ ಎತ್ತರ, ಹೂಗಳು ಮತ್ತು ಬಣ್ಣಗಳ ವಿವಿಧತೆ | * ಮಗುವಿಗೆ ತಿಳಿದಿರುವ ಗಿಡಮರಗಳ ಹೆಸರನ್ನು ಪಟ್ಟಿ ಮಾಡಿಸುವುದು.<br>* ಕಪ್ಪು ಹಲಗೆಯ ಮೇಲೆ ಸಸ್ಯದ ಚಿತ್ರವನ್ನು ಬರೆದು ಅದರ ಭಾಗಗಳನ್ನು ಹೇಳಿಸುವುದು.<br>* 1ನೇ ತರಗತಿಯ ಪಾಠ: 2 'ಸುತ್ತಲ ಸಸ್ಯಗಳು' ಪಾಠದ ಚಿತ್ರಗಳ ಸಹಾಯದಿಂದ ಸಸ್ಯಗಳ ಪರಿಚಯ ಮಾಡಿಸುವುದು.<br>* 2ನೇ ತರಗತಿಯ ಪಾಠ: 3 'ಹಿತ್ತಲ ಗಿಡ' ಪಾಠದ ಚಟುವಟಿಕೆಗಳನ್ನು ಮಾಡಿಸುವುದು.<br>* 2ನೇ ತರಗತಿಯ ಪಾಠ: 4 ' ನಾವಿರುವುದು ನಿಮಗಾಗಿ' ಪಾಠದ ಚಟುವಟಿಕೆಗಳನ್ನು ಮಾಡಿಸುವುದು.<br>* ಹೂ, ಹಣ್ಣು, ತರಕಾರಿಗೆ ಸಂಬಂಧಿಸಿದ ಶಿಶುಗೀತೆಗಳನ್ನು ಹೇಳಿಕೊಡುವುದು.<br>* ಮನೆಯಲ್ಲಿ ಬೆಳೆಯುವ ಔಷಧೀಯ ಸಸ್ಯಗಳ ಉಪಯೋಗಗಳನ್ನು ಪಟ್ಟಿ ಮಾಡುವುದು. (ಪುಟ ಸಂಖ್ಯೆ: 43) | ಸಸ್ಯಗಳನ್ನು ಅವುಗಳ ಎತ್ತರ, ಹೂಗಳು, ಬಣ್ಣ, ಎಲೆಗಳು ಮತ್ತು ಉಪಯೋಗಗಳನ್ನು ಆಧರಿಸಿ ಹೋಲಿಸುವರು |
| 4. | ಹಸಿಯಾಗಿ ಮತ್ತು ಬೇಯಿಸಿ ತಿನ್ನುವ ತರಕಾರಿಗಳು | * ವಿವಿಧ ತರಕಾರಿಗಳ ಚಿತ್ರಗಳನ್ನು ನೀಡಿ, ಹೆಸರಿಸಲು ಹೇಳುವುದು.<br>* ಮಕ್ಕಳು ಗುರುತಿಸಿದ ತರಕಾರಿಗಳಲ್ಲಿ ಹಸಿಯಾಗಿ/ಬೇಯಿಸಿ ತಿನ್ನುವ ಸೇವಿಸುವ ತರಕಾರಿಗಳನ್ನು ಗುರುತಿಸಲು ಹೇಳುವುದು. (ಪಠ್ಯಪುಸ್ತಕದ ಸಹಾಯ ಪಡೆಯಬಹುದು.)<br>* 2ನೇ ತರಗತಿಯ ಪಾಠ: 6 'ಬಗೆ ಬಗೆಯ ಆಹಾರ' ಪಾಠದ ಚಟುವಟಿಕೆಗಳನ್ನು ಮಾಡಿಸುವುದು.<br>* ತರಕಾರಿಗಳ ಚಿತ್ರ ಬಿಡಿಸಿ, ಬಣ್ಣ ಹಾಕಲು ಪ್ರೋತ್ಸಾಹಿಸುವುದು.<br>* ಆಹಾರ ವಸ್ತುಗಳ ಚಿತ್ರ ಸಂಗ್ರಹಿಸಲು ಪ್ರೋತ್ಸಾಹಿಸುವುದು. | ಹಸಿಯಾದ ಮತ್ತು ಬೇಯಿಸಿದ ತರಕಾರಿಗಳನ್ನು ಹೆಸರಿಸುವರು |
| 5. | ನೀರಿನ ಉಪಯೋಗ | * ಸಾಮಾನ್ಯವಾಗಿ ಮನೆಯಲ್ಲಿ ನೀರನ್ನು ಎಲ್ಲಿ ಸಂಗ್ರಹಿಸಿಡುತ್ತಾರೆಂದು ಮಕ್ಕಳಿಂದ ಹೇಳಿಸುವುದು.<br>* 1ನೇ ತರಗತಿಯ ಪಾಠ: 3 'ನೀರು ಬೇಕು ನೀರು' ಪಾಠದ ಚಟುವಟಿಕೆಗಳನ್ನು ಮಾಡಿಸುವುದು.<br>* 2ನೇ ತರಗತಿಯ ಪಾಠ: 5: 'ಅಮೂಲ್ಯ ನೀರು' ಪಾಠದ ಚಟುವಟಿಕೆಗಳನ್ನು ಮಾಡಿಸುವುದು.<br>* ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ನೀರು ಬೇಕು ನೀರು? ಏಕೆ ಬೇಕು ನೀರು? ಎಂದು ಹಾಡುತ್ತಾ ನೀರಿನ ಉಪಯೋಗಗಳನ್ನು ಹೇಳಿಸುವುದು.<br>* ನೀರಿನ ಬಳಕೆಯ ಮೂಕಾಭಿನಯ ಮಾಡಿಸುವುದು. | ನೀರಿನ ಅವಶ್ಯಕತೆ ಮತ್ತು ಮನೆಯ ಅಗತ್ಯತೆಯನ್ನು ಅರ್ಥಮಾಡಿಕೊಳ್ಳುವರು |
| 6. | ಒಳಾಂಗಣ ಮತ್ತು ಹೊರಾಂಗಣ ಆಟ | * ಕುಟುಂಬದವರೊಡನೆ, ಸ್ನೇಹಿತರೊಡನೆ ಆಡುವ ಆಟಗಳನ್ನು ಮಕ್ಕಳಿಂದ ಹೇಳಿಸುವುದು. ಮಕ್ಕಳು ಹೇಳಿದ ಆಟಗಳನ್ನು ಕಪ್ಪುಹಲಗೆಯ ಮೇಲೆ ಪಟ್ಟಿ ಮಾಡಿಸುವುದು. ಇವುಗಳನ್ನು ಮನೆಯ ಒಳಗೆ/ ಮನೆಯ ಹೊರಗೆ ಆಡುವ ಆಟಗಳೆಂದು ಗುರ್ತಿಸಲು ನೆರವಾಗುವುದು.<br>* 1ನೇ ತರಗತಿಯ ಪಠ್ಯಪುಸ್ತಕದ ಪುಟಸಂಖ್ಯೆ : 75, 76 ರಲ್ಲಿ ಇರುವ ಚಿತ್ರಗಳಲ್ಲಿ ಒಳಾಂಣ, ಹೊರಾಂಗಣ ಆಟ ಗುರುತಿಸಲು ಹೇಳುವುದು.<br>* 2ನೇ ತರಗತಿಯ ಪಾಠ: 16 ' ಆಡಿ ನಲಿ' ಪಾಠದ ಚಟುವಟಿಕೆಗಳನ್ನು ಮಾಡಿಸುವುದು.<br>* ಆಟ ಆಡುವುದರಿಂದ ನಮಗಾಗುವ ಪ್ರಯೋಜನಗಳನ್ನು ಹೇಳಿಸುವುದು.<br>* ಮಕ್ಕಳಿಗೆ ಖುಷಿಕೊಡುವ/ಸ್ಥಳೀಯವಾಗಿ ಜನಪ್ರಿಯವಾದ/ಎಲ್ಲಾ ಮಕ್ಕಳು ಭಾಗವಹಿಸಬಹುದಾದ ಒಂದು ಒಳಾಂಗಣ ಮತ್ತು ಹೊರಾಂಗಣ ಆಟ ಆಡಿಸುವುದು. | ಒಳಾಂಗಣ ಹಾಗೂ ಹೊರಾಂಗಣ ಆಟಗಳಲ್ಲಿ ಭಾಗವಹಿಸುವರು |

## ತರಗತಿ– 3

ನಿರೀಕ್ಷಿತ ಕಲಿಕಾ ಫಲಗಳು :

1. ತನ್ನ ಸುತ್ತಮುತ್ತಲಿನ ವಸ್ತುಗಳನ್ನು ಗುರುತಿಸುವರು ಮತ್ತು ವರ್ಣಿಸುವರು ಹಾಗೂ ನೀರು ಮತ್ತು ಆಹಾರದ ದುರ್ಬಳಕೆಯನ್ನು ಅರ್ಥಮಾಡಿಕೊಳ್ಳುವರು.
2. ಭಿನ್ನತೆ/ಹೋಲಿಕೆಗಳಿಗೆ ಅನುಗುಣವಾಗಿ ವಸ್ತುಗಳು, ಪಕ್ಷಿ/ಸಸ್ಯ/ಪ್ರಾಣಿಗಳನ್ನು ಹೋಲಿಸುವರು ಮತ್ತು ಗುಂಪು ಮಾಡುವರು.
3. ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿನ ಸರಳವಿನ್ಯಾಸಗಳು, ಮಾದರಿಗಳು ಮತ್ತು ನಕ್ಷೆಗಳನ್ನು ಚಿತ್ರಿಸುವರು.
4. ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿನ ದಿಕ್ಕುಗಳನ್ನು ಮತ್ತು ಸ್ಥಳಗಳನ್ನು ಗುರುತಿಸುವರು.
5. ಸಸ್ಯಗಳು, ಪ್ರಾಣಿಗಳು, ಹಿರಿಯರು ವಿವಿಧ ವಿಕಲಾಂಗರಿಗೆ ಹಾಗೂ ಸಹಾಯದ ಅಗತ್ಯವುಳ್ಳವರಿಗೆ ಸ್ಪಂದಿಸುವರು.
6. ಒಳ್ಳೆಯ/ಕೆಟ್ಟಸ್ಪರ್ಶ ಹಾಗೂ ಹುಡುಗರು ಮತ್ತು ಹುಡುಗಿಯರ ಬಗೆಗಿನ ಏಕರೂಪ ಗ್ರಹಿಕೆಯ ಬಗ್ಗೆ ದನಿ ಎತ್ತುವರು.

| ಕ್ರ.ಸಂ | ಕಲಿಕಾಂಶ/ಶೀರ್ಷಿಕೆ | ಕಲಿಕಾ ಪ್ರಕ್ರಿಯೆ | ಸಾಧಿಸಬಹುದಾದ ಕಲಿಕಾ ಫಲ |
|---|---|---|---|
| 1. | ವಸ್ತುಗಳನ್ನು ಗುರುತಿಸುವುದು ನೀರು ಮತ್ತು ಆಹಾರದ ದುರ್ಬಳಕೆಯನ್ನು ಅರ್ಥ ಮಾಡಿಕೊಳ್ಳುವುದು | * 2ನೇ ತರಗತಿಯ ಪುಟ ಸಂಖ್ಯೆ: 153, 154, 155, 156 ರಲ್ಲಿರುವ ಚಿತ್ರಗಳ ಬಗ್ಗೆ ಹೇಳಿಸುವುದು.<br>* ಮಕ್ಕಳಿಗೆ ತರಗತಿಯ ಹೊರಗಡೆ ಹೋಗಿ ಪರಿಸರದಲ್ಲಿ ಸಿಗುವ ವಸ್ತುಗಳನ್ನು( ಶಿಕ್ಷಕರ ಮಾರ್ಗದರ್ಶನದಲ್ಲಿ) ಆಯ್ದು ತರಲು ಹೇಳಿ, ಅವುಗಳನ್ನು ತರಗತಿಯಲ್ಲಿ ಅಚ್ಚುಕಟ್ಟಾಗಿ ಜೋಡಿಸಲು ಹೇಳುವುದು ಮತ್ತು ಜೋಡಿಸಿದ ವಸ್ತುಗಳ ಬಗ್ಗೆ ಮಕ್ಕಳಿಂದ ಹೇಳಿಸುವುದು.<br>* 3ನೇ ತರಗತಿಯ ಪಾಠ: 3 'ಗೂಬಕ್ಕನ ನ್ಯಾಯ' ಪಾಠದ ಚಟುವಟಿಕೆ ಮಾಡುವುದು.<br>* 3ನೇ ತರಗತಿಯ ಪಾಠ: 4 'ಹನಿ ಹೇಳಿದ ಕಥೆ', ಪಾಠ: 5 'ನೀರಿನ ಸಂಸಾರ' ಪಾಠದ ಚಟುವಟಿಕೆಯನ್ನು ಮಾಡಿಸುವುದು.<br>* ಸಾಮ್ಯಾನವಾಗಿ ನೀರು ಎಲ್ಲೆಲ್ಲಿ ಪೋಲಾಗುತ್ತೆಂದು ಮಕ್ಕಳನ್ನು ಕೇಳುವುದು. ನೀರು ಪೋಲಾಗುವುದನ್ನು ಹೇಗೆ ತಡೆಯಬಹುದೆಂದು ಚರ್ಚಿಸುವುದು.<br>* ವಿದ್ಯಾರ್ಥಿಗಳ ಮನೆಯಲ್ಲಿ ಯಾರ್‍ಯಾರು ಆಹಾರ ತಯಾರಿಸಲು ನೆರವಾಗುತ್ತಾರೆ ಎಂದು ಕೇಳುವುದು.<br>* ಹಬ್ಬದ ಊಟ/ವಿಶೇಷ ಭೋಜನದಲ್ಲಿ ಆಹಾರ ಪದಾರ್ಥವನ್ನು ಅಗತ್ಯಕ್ಕಿಂತ ಹೆಚ್ಚಾಗಿ ಹಾಕಿಸಿಕೊಂಡು ಬಿಸಾಡಬಾರದೆಂದು ತಿಳುವಳಿಕೆ ನೀಡುವುದು.<br>* ಆಹಾರ ಸೇವಿಸುವಾಗ ನಿಧಾನವಾಗಿ, ಸ್ವಲ್ಪ ಸ್ವಲ್ಪವೇ ಸೇವಿಸಬೇಕು ಏಕೆ? ಎಂಬುದನ್ನು ಚರ್ಚಿಸುವುದು.<br>* ಆಹಾರ ಮತ್ತು ನೀರು ದುರ್ಬಳಕೆಯಾಗುತ್ತಿರುವ ಸನ್ನಿವೇಶಗಳ ವೀಡಿಯೋ ತುಣುಕುಗಳನ್ನು ಮಕ್ಕಳಿಗೆ ತೋರಿಸುವುದು.<br>* ಮಕ್ಕಳಿಗೆ ನೀರು ಮತ್ತು ಆಹಾರದ ಪ್ರಾಮುಖ್ಯತೆಯನ್ನು ವಿವರಿಸುವುದು. | ತನ್ನ ಸುತ್ತಮುತ್ತಲಿನ ವಸ್ತುಗಳನ್ನು ಗುರುತಿಸುವರು ಮತ್ತು ವರ್ಣಿಸುವರು ಹಾಗೂ ನೀರು ಮತ್ತು ಆಹಾರದ ದುರ್ಬಳಕೆಯನ್ನು ಅರ್ಥಮಾಡಿಕೊಳ್ಳುವರು |
| 2. | ಪಕ್ಷಿಗಳ/ಸಸ್ಯಗಳು/ಪ್ರಾಣಿಗಳನ್ನು ಹೋಲಿಸಿ, ಗುಂಪು ಮಾಡುವುದು | * ಮಗುವಿನ ತನ್ನ ಊರಿನಲ್ಲಿ ನೋಡಿರುವ ಪಕ್ಷಿಗಳ ಹೆಸರನ್ನು ಬರೆಸುವುದು.<br>* ಹಕ್ಕಿಗಳ ಕೂಗನ್ನು ಕೇಳಿಸಿ (ಮೊಬೈಲ್‌ನ ಸಹಾಯ) ಮತ್ತು ಅದರ ಹೆಸರನ್ನು ಹೇಳಲು ಮಕ್ಕಳಿಗೆ ಉತ್ತೇಜಿಸುವುದು.<br>* ಮಕ್ಕಳಿಗೆ ಪ್ರಾಣಿ, ಪಕ್ಷಿಗಳ ಧ್ವನಿಯ ಅನುಕರಣೆಯನ್ನು ಮಾಡಲು ಹೇಳುವುದು.<br>* ಹಕ್ಕಿ ಮತ್ತು ಹಕ್ಕಿಯ ಗೂಡಿನ ಚಿತ್ರಗಳನ್ನು ತೋರಿಸುವುದು.<br>* 2ನೇ ತರಗತಿಯ ಪಾಠ: 1 'ಪ್ರಾಣಿ ಪರಿಚಯ' ಮತ್ತು ಪಾಠ: 3 'ಹಿತ್ತಲ ಗಿಡ' ಪಾಠದಲ್ಲಿನ ಚಿತ್ರಗಳ ಸಹಾಯದಿಂದ ಗುರುತಿಸಿ ಹೆಸರುಗಳನ್ನು ಹೇಳಿಸುವುದು. | ಭಿನ್ನತೆ/ಹೋಲಿಕೆಗಳಿಗೆ ಅನುಗುಣವಾಗಿ ವಸ್ತುಗಳು, ಪಕ್ಷಿ/ಸಸ್ಯ/ಪ್ರಾಣಿಗಳನ್ನು ಹೋಲಿಸುವರು ಮತ್ತು ಗುಂಪು ಮಾಡುವರು. |

| | | | |
|---|---|---|---|
| | | * 3ನೇ ತರಗತಿಯ ಪಾಠ : 1 'ತೋಟದಲ್ಲಿನ ಒಂದು ದಿನ' ಮತ್ತು ಪಾಠ: 2 'ಹಸಿರು ಸಿರಿ' ಪಾಠದಲ್ಲಿನ ಚಟುವಟಿಕೆಗಳನ್ನು ಮಾಡಿಸುವುದು.<br>* ಪ್ರಾಣಿಗಳ ಚಿತ್ರಗಳನ್ನು (ಹೆಸರನ್ನು) ಗಮನದಲ್ಲಿರಿಸಿಕೊಂಡು ಅವುಗಳ ಗಾತ್ರಗಳಿಗನುಗುಣವಾಗಿ ಜೋಡಿಸುವುದು. (ಪುಟ ಸಂಖ್ಯೆ: 8), ಕಾಡು ಪ್ರಾಣಿಗಳ ಮತ್ತು ಸಾಕು ಪ್ರಾಣಿಗಳನ್ನು ವಿಂಗಡಿಸಲು ಕಲಿಸುವುದು.<br>* ಸಸ್ಯಾಹಾರಿ, ಮಾಂಸಾಹಾರಿ ಮತ್ತು ಮಿಶ್ರಾಹಾರಿ ಪ್ರಾಣಿಗಳನ್ನು ವಿಂಗಡಿಸುವುದು.<br>* ಪ್ರಾಣಿಗಳ ವಾಸಸ್ಥಳಗಳನ್ನು (ಹೇಳಲು) ಗುರುತಿಸಲು ಕಲಿಸುವುದು.<br>ಉದಾಹರಣೆ: ಸಿಂಹ → ಗುಹೆ ಗೀಜಗ → ಗೂಡು<br>ಹಾವು → ಹುತ್ತ ಜಿರಳೆ → ಸಂಧಿಗಳು<br>* 3ನೇ ತರಗತಿಯ ಪಾಠ–2 ಹಸಿರು ಸಿರಿ ಪಾಠದ ಎಲ್ಲಾ ಚಟುವಟಿಕೆಗಳನ್ನು ಮಾಡಿಸುವುದು. | |
| 3. | ಸಹಾಯದ ಅಗತ್ಯವುಳ್ಳವರಿಗೆ ಸ್ಪಂದನೆ | * 2ನೇ ತರಗತಿಯ ಪಾಠ–2 'ಪ್ರಾಣಿ ಪಾಲನೆ', ಪಾಠದ ಪುಟ ಸಂಖ್ಯೆ: 16, 21, 22, 23, 24 ರ ಚಟುವಟಿಕೆಗಳನ್ನು ಮಾಡಿಸುವುದು.<br>* 3ನೇ ತರಗತಿಯ ಪಾಠ–18 'ಇವರೂ ನಮ್ಮಂತೆ' ಪಾಠದ ಚಟುವಟಿಕೆಗಳನ್ನು ಮಾಡಿಸುವುದು.<br>* ಸಹಾಯ ಮತ್ತು ಸಂವೇದನಾಶೀಲ ಅಗತ್ಯವಿರುವ ಸನ್ನಿವೇಶವನ್ನು ದಿನನಿತ್ಯದ ತರಗತಿಯಲ್ಲಿ ಸೃಷ್ಟಿಸಿ, ಮಕ್ಕಳು ಹೇಗೆ ಪ್ರತಿಕ್ರಿಯಿಸುತ್ತಾರೆಂದು ವೀಕ್ಷಿಸಿ, ಚರ್ಚಿಸುವುದು.<br>* ವಿಶೇಷ ಅಗತ್ಯವಿರುವ ಮಕ್ಕಳಿಗೆ ಶಾಲೆಯ ಮಕ್ಕಳು ಹೇಗೆ ಸಹಕರಿಸುತ್ತಾರೆ ಎಂಬುದನ್ನು ಸಂವಾದ ರೂಪದಲ್ಲಿ ಚರ್ಚಿಸುವುದು.<br>* ಶಾಲಾ ಗ್ರಂಥಾಲಯದಲ್ಲಿರುವ ವಿಶೇಷ ಅಗತ್ಯವಿದ್ದು ಸಾಧನೆ ಮಾಡಿದವರನ್ನು ಕುರಿತ ಪುಸ್ತಕದ ಕಥೆ ಹೇಳಿಸುವುದು. ಉದಾ: ಮಾಲತಿ ಹೊಳ್ಳ.<br>* 2021ರ ಪ್ಯಾರಾ ಒಲಂಪಿಕ್ಸ್‌ನಲ್ಲಿ ಸಾಧನೆ ಮಾಡಿದವರ ಚಿತ್ರಗಳ ಚಾರ್ಟ್ ತಯಾರಿಸಿ, ಅವರ ಸಾಧನೆಯನ್ನು ಪರಿಚಯಿಸುವುದು.<br>* 2ನೇ ತರಗತಿ ಪಾಠ–14 ಹಿರಿಯರ ಆರೈಕೆ ಪಾಠದ ಚಟುವಟಿಕೆಗಳನ್ನು ಮಾಡಿಸುವುದು. (ಸಂವಾದ ರೂಪದಲ್ಲಿ) | ಸಸ್ಯಗಳು, ಪ್ರಾಣಿಗಳು, ಹಿರಿಯರು ವಿವಿಧ ವಿಕಲಾಂಗರಿಗೆ ಹಾಗೂ ಸಹಾಯದ ಅಗತ್ಯವುಳ್ಳವರಿಗೆ ಸ್ಪಂದಿಸುವರು. |
| 4. | ಒಳ್ಳೆಯ ಸ್ಪರ್ಶ ಮತ್ತು ಕೆಟ್ಟ ಸ್ಪರ್ಶದ ಬಗ್ಗೆ ಏಕರೂಪ ಗ್ರಹಿಕೆ | * ಮಕ್ಕಳಿಗೆ ತಮ್ಮ ದೇಹದ ಭಾಗಗಳ ಅರಿವನ್ನು ಮೂಡಿಸುವುದು.<br>* ಅಪರಿಚಿತರು/ಪರಿಚಯದ ಹಿರಿಯರು (ಅನ್ಯ ಲಿಂಗದವರು) ಮಕ್ಕಳ ದೇಹದ ಯಾವ ಭಾಗವನ್ನು ಸ್ಪರ್ಶಿಸಬಾರದು ಎಂಬ ತಿಳುವಳಿಕೆಯನ್ನು ಮಕ್ಕಳಿಗೆ ನೀಡುವುದು.<br>* ಚಿತ್ರಗಳ ಮೂಲಕ ಒಳ್ಳೆಯ ಸ್ಪರ್ಶ ಮತ್ತು ಕೆಟ್ಟ ಸ್ಪರ್ಶದ ಬಗ್ಗೆ ತಿಳುವಳಿಕೆ ನೀಡುವುದು.<br>* ಯಾರಾದರೂ ತಮ್ಮ ಹೊಟ್ಟೆ, ತೊಡೆ. . .ಇತ್ಯಾದಿ ಭಾಗಗಳನ್ನು ಅನಾವಶ್ಯಕವಾಗಿ ಸ್ಪರ್ಶಿಸುವುದು. ನೋವನ್ನು ಉಂಟು ಮಾಡುವಂತೆ ವರ್ತಿಸಿದಾಗ ಅದನ್ನು ವಿರೋಧಿಸುವ ಮತ್ತು ಪೋಷಕರಿಗೆ ವರದಿ ಮಾಡುವ ಗುಣವನ್ನು ಮಕ್ಕಳಲ್ಲಿ ಬೆಳೆಸುವುದು.<br>* ಚಾಕಲೇಟ್, ತಿಂಡಿ ಇತ್ಯಾದಿ ಆಸೆ ತೋರಿಸಿ ಅಪರಿಚಿತರು ಅಥವಾ ಒಂಟಿಯಾಗಿ ಇರುವವರು ಕರೆದಾಗ ಹೋಗಬಾರದೆಂಬ ಮಾಹಿತಿಯನ್ನು ಮಕ್ಕಳಿಗೆ ನೀಡುವುದು.<br>* ಒಳ್ಳೆಯ ಸ್ಪರ್ಶ ಮತ್ತು ಕೆಟ್ಟ ಸ್ಪರ್ಶದ ಮೂಕಾಭಿನಯವನ್ನು ಮಕ್ಕಳಿಂದ ಮಾಡಿಸುವುದು.<br>* ಶಾಲೆ ಮತ್ತು ತರಗತಿಯ ಎಲ್ಲಾ ಚಟುವಟಿಕೆಗಳಲ್ಲಿ ಎಲ್ಲಾ ಮಕ್ಕಳೂ ಯಾವುದೇ ತಾರತಮ್ಯವಿಲ್ಲದೆ ಸಮಾನವಾಗಿ ಭಾಗವಹಿಸುವ | ಒಳ್ಳೆಯ/ಕೆಟ್ಟಸ್ಪರ್ಶ ಹಾಗೂ ಹುಡುಗರು ಮತ್ತು ಹುಡುಗಿಯರ ಬಗೆಗಿನ ಏಕರೂಪ ಗ್ರಹಿಕೆಯ ಬಗ್ಗೆ ದನಿ ಎತ್ತುವರು |

| | | | |
|---|---|---|---|
| | | ಮುಕ್ತ ಅವಕಾಶ ನೀಡುವುದು. | |
| 5. | ದಿಕ್ಕುಗಳು ಮತ್ತು ಸ್ಥಳಗಳನ್ನು ಗುರುತಿಸುವುದು. | * ಒಂದನೇ ತರಗತಿ ಪಠ್ಯಪುಸ್ತಕದ ಪುಟ ಸಂಖ್ಯೆ: 98,99ರ ಚಿತ್ರಗಳನ್ನು ತೋರಿಸಿ ಅವುಗಳ ಹೆಸರು ಹೇಳಿಸುವುದು.<br>* ಎರಡನೇ ತರಗತಿಯ ಬಾನಂಗಳ ಪಾಠದಲ್ಲಿ ಸೂಚಿಸಿದ ದಿಕ್ಕುಗಳ ಪರಿಚಯಿಸುವ ಚಟುವಟಿಕೆಯನ್ನು ಮಾಡಿಸುವುದು.<br>* 3ನೇ ತರಗತಿ ಪಠ್ಯಪುಸ್ತಕದ ಪುಟ ಸಂಖ್ಯೆ: 186, 187 ರ ಚಟುವಟಿಕೆಯನ್ನು ಮಾಡಿಸುವುದು.<br>* ಮಕ್ಕಳ ಶಾಲೆ/ಮನೆಯ ಸುತ್ತ ಮುತ್ತಲಿನ ಪರಿಸರದಲ್ಲಿರುವ ಸ್ಥಳಗಳು ಮತ್ತು ದಿಕ್ಕುಗಳನ್ನು ಹೇಳಿಸುವುದು.<br>* ಕಪ್ಪು ಹಲಗೆಯ ಮೇಲೆ ಸ್ಥಳದ ಹೆಸರು ಬರೆದು, ಅವು ಇರುವ ದಿಕ್ಕುಗಳ ಹೆಸರನ್ನು ಬರೆಸುವುದು. | ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿನ ದಿಕ್ಕುಗಳನ್ನು ಮತ್ತು ಸ್ಥಳಗಳನ್ನು ಗುರುತಿಸುವರು |
| 6. | ಸರಳ ನಕ್ಷೆಗಳ ರಚನೆ | * 3ನೇ ತರಗತಿಯ ಪಾಠ–24 ನಕ್ಷೆ ಪಾಠದ ಚಟುವಟಿಕೆಗಳನ್ನು ಮಾಡಿಸುವುದು.<br>* ಸಾಮಾನ್ಯವಾಗಿ ನಕ್ಷೆಯಲ್ಲಿ ಬಳಸುವ ಚಿಹ್ನೆಗಳನ್ನು ಬರೆಸುವುದು.<br>* ತರಗತಿ ಕೊಠಡಿಯಲ್ಲಿ ಶಾಲೆಯ ನಕ್ಷೆಯನ್ನು ಮಕ್ಕಳಿಂದ ಮಾಡಿಸುವುದು.<br>* ಒಂದು ಊರಿನ ಮಾದರಿಯನ್ನು ತಯಾರಿಸಿ, ತರಗತಿಯಲ್ಲಿ ಪ್ರದರ್ಶಿಸುವುದು.<br>* ವಿವಿಧ ಚಿಹ್ನೆಗಳ ಮಾದರಿಯನ್ನು (ಉದಾ: ಮನೆ, ಬೆಟ್ಟ, ವಾಟರ್‌ಟ್ಯಾಂಕ್) ತಯಾರಿಸಿ, ಊರಿನ ನಕ್ಷೆಯ ಚೌಕದಲ್ಲಿ ಸರಿಯಾದ ಭಾಗದಲ್ಲಿ ಮಕ್ಕಳು ಇಡುವಂತೆ ಮಾಡುವುದು.<br>* ಊರಿನ/ಶಾಲೆಯ/ಒಂದುರಸ್ತೆಯ/ಸರಳ ನಕ್ಷೆಯನ್ನು ಅಲಂಕರಿಸಲು ಮಕ್ಕಳಿಗೆ ನೆರವಾಗುವುದು.<br>* ಭಾರತ, ಕರ್ನಾಟಕ ಮತ್ತು ಮಕ್ಕಳಿಗೆ ಸಂಬಂಧಿಸಿದ ಜಿಲ್ಲೆಯ ಭೂಪಟದ ಪರಿಚಯ ಮಾಡಿಸುವುದು. | ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿನ ಸರಳವಿನ್ಯಾಸಗಳು, ಮಾದರಿಗಳು ಮತ್ತು ನಕ್ಷೆಗಳನ್ನು ಚಿತ್ರಿಸುವರು |

## ತರಗತಿ– 4

ನಿರೀಕ್ಷಿತ ಕಲಿಕಾ ಫಲಗಳು :

1. ತಮ್ಮ ಸುತ್ತಲಿನ ಪರಿಸರದಲ್ಲಿ ನೋಡುವ ವಸ್ತುಗಳನ್ನು ವಿವರಿಸುವರು.
2. ಸ್ಥಳೀಯ ಚಟುವಟಿಕೆಗಳಾದ ವ್ಯವಸಾಯ, ಕಟ್ಟಡ ನಿರ್ಮಾಣ, ಸ್ಥಳೀಯ ಕಲಾವಿದರು ಮತ್ತು ಕುಶಲಕರ್ಮಿಗಳ ಕುರಿತು ವಿವರಿಸುವರು.
3. ಜಲಮಾಲಿನ್ಯ ಮತ್ತು ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳನ್ನು ಅರ್ಥಮಾಡಿಕೊಳ್ಳುವರು.
4. ತ್ಯಾಜ್ಯವಸ್ತುಗಳ ವಿಲೇವಾರಿ ಕ್ರಮ ಮತ್ತು ಆರೋಗ್ಯಕರ ಅಭ್ಯಾಸಗಳ ಕುರಿತು ತಿಳಿಯುವರು.
5. ರಂಗೋಲಿಗಳು, ಭೂಪಟಗಳು, ಆಕೃತಿಗಳು ಮತ್ತು ರಾಷ್ಟ್ರೀಯ ಲಾಂಛನಗಳನ್ನು ರಚಿಸುವರು.
6. ಸಸ್ಯಗಳು, ಪ್ರಾಣಿಗಳು, ಹಿರಿಯರು, ವಿಕಲಚೇತನರಿಗೆ ಸ್ಪಂದಿಸುವರು ಮತ್ತು ಅವರ ಬಗ್ಗೆ ಕಾಳಜಿವಹಿಸುವರು.

| ಕ್ರ.ಸಂ | ಕಲಿಕಾಂಶ/ಶೀರ್ಷಿಕೆ | ಕಲಿಕಾ ಪ್ರಕ್ರಿಯೆ | ಸಾಧಿಸಬಹುದಾದ ಕಲಿಕಾ ಫಲ |
|---|---|---|---|
| 1. | ಪರಿಸರದಲ್ಲಿ ಕಾಣುವ ವಸ್ತುಗಳು | * 3ನೇ ತರಗತಿಯ ಪಾಠ: ' ಗೂಬಕ್ಕನ ನ್ಯಾಯ' ಪಾಠದ ಕಥೆಯನ್ನು ಹೇಳುವುದು.<br>* ಮಕ್ಕಳು ಪರಿಸರ ವೀಕ್ಷಿಸಲು ಅವಕಾಶ ನೀಡಿ, ವೀಕ್ಷಿಸಿದ ಕೆಲವು ವಸ್ತುಗಳ ಹೆಸರನ್ನು ಬರೆಯಲು ಹೇಳುವುದು.<br>* ಮಕ್ಕಳು ವೀಕ್ಷಿಸಿದ ವಸ್ತುಗಳನ್ನು ಸಜೀವ ನಿರ್ಜೀವ ಎಂದು ವಿಂಗಡಿಸಿ ಹೇಳಲು ಮಕ್ಕಳಿಗೆ ನೆರವಾಗುವುದು.<br>* ಪಟ್ಟಿ ಮಾಡಿದ ವಸ್ತುಗಳ ಪ್ರಯೋಜನ, ಸಂರಕ್ಷಣೆಯ ಬಗ್ಗೆ ಹೇಳಿಸಿ ಬರೆಸುವುದು.<br>* ಪರಿಸರದಲ್ಲಿ ಬಿದ್ದಿರುವ ಅಪಾಯಕಾರಿ ವಸ್ತು, ಉಪಯೋಗ ಇಲ್ಲದ ವಸ್ತು (ತ್ಯಾಜ್ಯ)ಗಳನ್ನು ಗುರುತಿಸುವುದು. | ತಮ್ಮ ಸುತ್ತಲಿನ ಪರಿಸರದಲ್ಲಿ ನೋಡುವ ವಸ್ತುಗಳನ್ನು ವಿವರಿಸುವರು |
| 2. | ಸ್ಥಳೀಯ ವ್ಯವಸಾಯ, ಕಟ್ಟಡ ನಿರ್ಮಾಣ, ಕಲಾವಿದರು, ಕುಶಲ ಕರ್ಮಿಗಳ ಬಗ್ಗೆ ಆಸಕ್ತಿ ಮೂಡಿಸುವುದು. | * 3ನೇ ತರಗತಿಯ ಪಠ್ಯಪುಸ್ತಕದ ಪುಟಸಂಖ್ಯೆ: 198ರ ಚಟುವಟಿಕೆ ಮಾಡಿಸುವುದು ಮತ್ತು ಅದರ ಬಗ್ಗೆ ತಿಳಿಸುವುದು.<br>* 3ನೇ ತರಗತಿಯ ಪಠ್ಯಪುಸ್ತಕದ ಪುಟಸಂಖ್ಯೆ: 200ರ ಚಟುವಟಿಕೆ ಮಾಡಿಸುವುದು ಮತ್ತು ಅದರ ಬಗ್ಗೆ ಹೇಳಿಸುವುದು<br>* 4ನೇ ತರಗತಿಯ ಪಠ್ಯಪುಸ್ತಕದ ಪಾಠ: 22 ' ಮಡಕೆಯ ಕಥೆ' ಪಾಠದ ಚಟುವಟಿಕೆಗಳನ್ನು ಮಾಡಿಸುವುದು.<br>* ನಮ್ಮೂರಿನ ಕಲಾವಿದರ ಬಗ್ಗೆ ಹೇಳಿ ಪರಿಚಯಿಸುವುದು ಹಾಗೂ ಸಾಧನೆಗಳ ಬಗ್ಗೆ ಹೇಳಿ ಮಕ್ಕಳಲ್ಲಿ ಆಸಕ್ತಿ ಮೂಡಿಸುವುದು.<br>* 4ನೇ ತರಗತಿಯ ಪಠ್ಯಪುಸ್ತಕದ ಪಾಠ: 19 'ವೃತ್ತಿ ವಿಶೇಷ' ಪಾಠದ ಚಟುವಟಿಕೆಗಳನ್ನು ಮಾಡಿಸುವುದು. | ಸ್ಥಳೀಯ ಚಟುವಟಿಕೆಗಳಾದ ವ್ಯವಸಾಯ, ಕಟ್ಟಡ ನಿರ್ಮಾಣ, ಸ್ಥಳೀಯ ಕಲಾವಿದರು ಮತ್ತು ಕುಶಲಕರ್ಮಿಗಳ ಕುರಿತು ವಿವರಿಸುವರು |
| 3. | ತ್ಯಾಜ್ಯ ವಸ್ತುಗಳ ವಿಲೇವಾರಿ | * 3ನೇ ತರಗತಿಯ ಪಠ್ಯಪುಸ್ತಕದ ಪಾಠ: 9' ಚಂದದ ಮನೆ' ಪಾಠದಲ್ಲಿ ಇರುವ ಉತ್ತಮ ಮನೆ ಹೇಗಿರಬೇಕು ಎಂಬ ಅಂಶಗಳನ್ನು ಹೇಳುವುದು.<br>* 4ನೇ ತರಗತಿಯ ಪಠ್ಯಪುಸ್ತಕದ ಪಾಠ: 11 ' ಕಸ ರಸ' ಪಾಠದ ಚಟುವಟಿಕೆಗಳನ್ನು ಮಾಡಿಸುವುದು.<br>* ತ್ಯಾಜ್ಯ ವಸ್ತುಗಳು ಯಾವುದೆಂದು ಮಕ್ಕಳಿಂದ ಪಟ್ಟಿ ಮಾಡಿಸುವುದು ಉದಾ: ತರಕಾರಿ ಸಿಪ್ಪೆ, ತಿಂಡಿಯ ತುಣುಕು, ಟೀ ಸೊಪ್ಪು . . .<br>* ಒಣ ಕಸ ಮತ್ತು ಹಸಿ ಕಸಗಳು ಯಾವುದೆಂದು ಮಕ್ಕಳಿಂದ ಹೇಳಿಸುವುದು<br>* ಒಣ ಕಸ ಮತ್ತು ಹಸಿ ಕಸಗಳ ನಡುವಿನ ವ್ಯತ್ಯಾಸಗಳನ್ನು ಪಟ್ಟಿ ಮಾಡಿಸುವುದು.<br>* ವಿಷಕಾರಿ ಕಸ ಮತ್ತು ಮಲಿನ ಕಸಗಳು ಯಾವುವೆಂದು ಮಕ್ಕಳಿಗೆ ವಿವರಿಸಿ ತಿಳಿಸುವುದು.<br>* ತ್ಯಾಜ್ಯ ವಸ್ತುಗಳ ವಿಲೇವಾರಿಯ ಪ್ರಾಮುಖ್ಯತೆಯ ಬಗ್ಗೆ (ಸಾಕ್ಷಚಿತ್ರ) ವೀಡಿಯೋ ತುಣುಕುಗಳನ್ನು ತೋರಿಸುವುದು.<br>* ಮಕ್ಕಳಿಗೆ ನೈರ್ಮಲ್ಯದ (ಆರೋಗ್ಯಕರ) ಅನೇಕ ಅಭ್ಯಾಸಗಳನ್ನು ಕಲಿಸುವುದು. | ತ್ಯಾಜ್ಯವಸ್ತುಗಳ ವಿಲೇವಾರಿ ಕ್ರಮ ಮತ್ತು ಆರೋಗ್ಯಕರ ಅಭ್ಯಾಸಗಳ ಕುರಿತು ತಿಳಿಯುವರು |

| | | | |
|---|---|---|---|
| | | * ಮಕ್ಕಳಿಂದ ಕಸ ವಿಲೇವಾರಿಗೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸಿ, ತರಗತಿಯಲ್ಲಿ ಪ್ರದರ್ಶಿಸಲು ನೆರವಾಗುವುದು. | |
| 4. | ಜಲಮಾಲಿನ್ಯ | * ಮಕ್ಕಳಿಗೆ ಶುದ್ಧ ನೀರು ಮತ್ತು ಅಶುದ್ಧ ನೀರಿನ ಚಿತ್ರವನ್ನು ತೋರಿಸುವ ಮೂಲಕ ಮಾಲಿನ್ಯದ ಪರಿಕಲ್ಪನೆಯನ್ನು ಮೂಡಿಸುವುದು.<br>* 3ನೇ ತರಗತಿ ಪರಿಸರ ಅಧ್ಯಯನ ಪಠ್ಯಪುಸ್ತಕದ ಪುಟಸಂಖ್ಯೆ 30ರ ಸಹಾಯದಿಂದ ದಿನಬಳಕೆಗೆ ಯೋಗ್ಯವಿರುವ ನೀರಿನ ಆಕರಗಳನ್ನು ಪಟ್ಟಿ ಮಾಡಿಸುವುದು.<br>* 3ನೇ ತರಗತಿ ಪರಿಸರ ಅಧ್ಯಯನ ಪಠ್ಯಪುಸ್ತಕದ ಪುಟಸಂಖ್ಯೆ 34ರ ಸಹಾಯದಿಂದ ಮಕ್ಕಳಿಗೆ ನೀರಿನ ಪ್ರಾಮುಖ್ಯತೆಯನ್ನು ಮೂಡಿಸುವುದು.<br>* 4ನೇ ತರಗತಿಯ ಪಾಠ: 7 'ಜಲಮಾಲಿನ್ಯ' ಪಾಠದ ಚಟುವಟಿಕೆಯನ್ನು ಮಾಡಿಸುವುದು.<br>* ಮಲಿನಗೊಂಡ ನೀರಿನಿಂದಾಗುವ ಪರಿಣಾಮಗಳನ್ನು ಪಟ್ಟಿ ಮಾಡಿಸುವುದು. (ನೀರಿನಿಂದ ಬರುವ ಕಾಯಿಲೆಗಳು)<br>* ಮಲಿನಗೊಂಡ ನೀರನ್ನು ಶುದ್ಧಗೊಳಿಸುವ ಕ್ರಮಗಳನ್ನೊಳಗೊಂಡ ವೀಡಿಯೋವನ್ನು ಮಕ್ಕಳಿಗೆ ತೋರಿಸುವುದು. | ಜಲಮಾಲಿನ್ಯ ಮತ್ತು ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳನ್ನು ಅರ್ಥಮಾಡಿಕೊಳ್ಳುವರು |
| 5. | ಸ್ಪಂದನೆ ಮತ್ತು ಕಾಳಜಿ | * 2ನೇ ತರಗತಿಯ ಪಾಠ–2 'ಪ್ರಾಣಿ ಪಾಲನೆ' ಪುಟ ಸಂಖ್ಯೆ: 16,21,23,24ರ ಚಟುವಟಿಕೆಗಳನ್ನು ಮಾಡಿಸುವುದು.<br>* 2ನೇ ತರಗತಿಯ ಪಾಠ 14 ಹಿರಿಯರ ಆರೈಕೆ ಪಾಠದ ಚಟುವಟಿಕೆಗಳನ್ನು ಮಾಡಿಸುವುದು.<br>* ಮಕ್ಕಳು ತಮ್ಮ ಮನೆಯಲ್ಲಿರುವ ಹಿರಿಯರಿಗೆ ಹೇಗೆ ನೆರವಾಗುತ್ತಾರೆಂಬುದನ್ನು ಹೇಳಿಸುವುದು.<br>* ಮಕ್ಕಳು ಇಷ್ಟ ಪಡುವ ಪ್ರಾಣಿಗಳು ಮತ್ತು ಅವುಗಳನ್ನು ಅವರು ಹೇಗೆ ಆರೈಕೆ ಮಾಡುತ್ತಾರೆ ಎಂಬುದನ್ನು ಚರ್ಚಿಸುವುದು.<br>* 3ನೇ ತರಗತಿಯ ಪಾಠ–18 'ಇವರು ನಮ್ಮಂತೆ' ಪಾಠದ ಚಟುವಟಿಕೆಗಳನ್ನು ತರಗತಿಯಲ್ಲಿ ಮಾಡಿಸುವುದು.<br>* ಮಕ್ಕಳು ಗುರುತಿಸಿರುವ ವಿಶೇಷ ಅಗತ್ಯವುಳ್ಳವರಿಗೆ ಬೇಕಾಗುವ ಸಹಕಾರದ ಬಗ್ಗೆ ಚರ್ಚಿಸುವುದು.<br>* 4ನೇ ತರಗತಿಯ ಪಾಠ: 18 'ಪ್ರತಿಯೊಬ್ಬರು ವಿಶಿಷ್ಟ' ಪಾಠದ ಮೂಲಕ ವಿಶೇಷ ಅಗತ್ಯವುಳ್ಳವರ ಸಂವಹನ ಕ್ರಮಗಳನ್ನು ತಿಳಿಸುವುದು ಅವರೊಂದಿಗೆ ಇತರರು ಹೇಗೆ ವರ್ತಿಸಬೇಕು ಎಂಬುದನ್ನು ಮಕ್ಕಳೊಂದಿಗೆ ಚರ್ಚಿಸುವುದು.<br>* ಸಹಾಯ ಮತ್ತು ಸಂವೇದನೆ ಅಗತ್ಯವಿರುವ ದಿನನಿತ್ಯದ ಸನ್ನಿವೇಶವನ್ನು ತರಗತಿಯಲ್ಲಿ ಸೃಷ್ಟಿಸಿ ಮಕ್ಕಳು ಆ ಸನ್ನಿವೇಶದಲ್ಲಿ ಏನು ಮಾಡುತ್ತಾರೆ? ಹೇಗೆ ನೆರವಾಗುತ್ತಾರೆ ಎಂಬುದನ್ನು ಚರ್ಚಿಸುವುದು.<br>* ವಿಶೇಷ ಅಗತ್ಯತೆ ಇದ್ದರೂ, ಸಾಧನೆ ಮಾಡಿರುವವರ ಚಿತ್ರಗಳನ್ನು ತೋರಿಸಿ, ಅವರ ಸಾಧನೆಗಳನ್ನು ಮಕ್ಕಳಿಗೆ ಪರಿಚಯಿಸುವುದು. | ಸಸ್ಯಗಳು, ಪ್ರಾಣಿಗಳು, ಹಿರಿಯರು, ವಿಕಲಚೇತನರಿಗೆ ಸ್ಪಂದಿಸುವರು ಮತ್ತು ಅವರ ಬಗ್ಗೆ ಕಾಳಜಿವಹಿಸುವರು |
| 6. | ರಂಗೋಲಿಗಳು, ಭೂಪಟಗಳು, ರಾಷ್ಟ್ರೀಯ ಲಾಂಛನಗಳನ್ನು ರಚಿಸುವರು. | * ಗೋಳ, ಚಂದ್ರನ ವಿವಿಧ ಆಕಾರಗಳು, ಸೂರ್ಯನ ಆಕೃತಿಗಳನ್ನು ಪರಿಚಯಿಸುವುದು.<br>* ಈ ಆಕೃತಿಗಳನ್ನು ಬಣ್ಣದ ರಂಗೋಲಿ ಪುಡಿಯಿಂದ ರಚಿಸಲು ಮಕ್ಕಳಿಗೆ ನೆರವಾಗುವುದು.<br>* 4ನೇ ತರಗತಿಯ ಪಾಠ: 12 'ನಕ್ಷೆ–ಕಲಿ–ದಾರಿ ತಿಳಿ' ಪಾಠದ ಚಟುವಟಿಕೆಗಳನ್ನು ಮಾಡಿಸುವುದು.<br>* ಕರ್ನಾಟಕದ ಭೂಪಟವನ್ನು ಪರಿಚಯಿಸಿ, ಆಕಾರ, ಭೂಪಟದಲ್ಲಿನ ಚಿಹ್ನೆಗಳನ್ನು ಪರಿಚಯಿಸುವುದು.<br>* 4ನೇ ತರಗತಿಯ ಪಾಠ: 25 'ನಮ್ಮ ರಾಜ್ಯ–ನಮ್ಮ ಹೆಮ್ಮೆ' ಪಾಠದ ಚಟುವಟಿಕೆಗಳನ್ನು ಮಾಡಿಸುವುದು.<br>* 4ನೇ ತರಗತಿಯ ಪಾಠ–20 'ಹಬ್ಬ ಹರುಷ' ಪಾಠದ ಮೂಲಕ ರಾಷ್ಟ್ರೀಯ ಹಬ್ಬಗಳು ಮತ್ತು ರಾಷ್ಟ್ರೀಯ ಲಾಂಛನಗಳನ್ನು ಪರಿಚಯ ಮಾಡಿಸುವುದು.<br>* ರಾಷ್ಟ್ರೀಯ ಲಾಂಛನಗಳ ರೇಖಾ ಚಿತ್ರ ಬರೆಯುವ ಅಭ್ಯಾಸ ಮಾಡಿಸುವುದು.<br>* ರಾಷ್ಟ್ರೀಯ ಲಾಂಛನಗಳ ರೇಖಾಚಿತ್ರಗಳಿಗೆ ಬಣ್ಣ ತುಂಬುವ ಚಟುವಟಿಕೆ ಮಾಡಿಸುವುದು. | ರಂಗೋಲಿಗಳು, ಭೂಪಟಗಳು, ಆಕೃತಿಗಳು ಮತ್ತು ರಾಷ್ಟ್ರೀಯ ಲಾಂಛನಗಳನ್ನು ರಚಿಸುವರು |

| | | | |
|---|---|---|---|
| | | * ರಾಷ್ಟ್ರೀಯ ಲಾಂಛನಗಳ ಮಾದರಿಯನ್ನು ಮಕ್ಕಳಿಂದ ಮಾಡಿಸುವುದು.<br>* ರಾಷ್ಟ್ರೀಯ ಲಾಂಛನಗಳನ್ನು ರಂಗೋಲಿ ಪುಡಿಯಿಂದ ರಚಿಸಿ, ಬಣ್ಣ ತುಂಬಲು ಮಕ್ಕಳಿಗೆ ನೆರವಾಗುವುದು.<br>(ಮಕ್ಕಳು ರಚಿಸಲು ಸಾಧ್ಯವಾಗುವ) | |

## ತರಗತಿ– 5

ನಿರೀಕ್ಷಿತ ಕಲಿಕಾ ಫಲಗಳು :

1. ಸಜೀವ ಮತ್ತು ನಿರ್ಜೀವ ವಸ್ತುಗಳ ಗುಣಗಳನ್ನು ಅರ್ಥಮಾಡಿಕೊಳ್ಳುವರು ಹಾಗೂ ಪ್ರಾಣಿ ಮತ್ತು ಸಸ್ಯಗಳಲ್ಲಿನ ಪರಸ್ಪರ ಅವಲಂಬನೆಯನ್ನು ಪ್ರಶಂಸಿಸುವರು.
2. ವಿವಿಧ ಆಹಾರ ಮತ್ತು ಪೌಷ್ಠಿಕಾಂಶಗಳ ಮೂಲಗಳನ್ನು ತಿಳಿಯುವರು.
3. ಈಗಿನ ಮತ್ತು ಹಿಂದಿನ ಆಚಾರಗಳು/ಸಂಪ್ರದಾಯಗಳು/ಜೀವನಗಳ ನಡುವೆ ಇರುವ ವ್ಯತ್ಯಾಸವನ್ನು ತಿಳಿಯುವರು.
4. ಗತಭಾರತದ ವಿಷಯಗಳನ್ನು ತಿಳಿಯಲು ಕುತೂಹಲ ಹೆಚ್ಚಿಸಿಕೊಳ್ಳುವರು.
5. ಪರಿಸರದೆಡೆಗೆ ಸೂಕ್ಷ್ಮತೆಯನ್ನು ತೋರುವರು ಮತ್ತು ಸಂಪನ್ಮೂಲಗಳ ರಕ್ಷಣೆ, ತ್ಯಾಜ್ಯನಿರ್ವಹಣೆ ಮತ್ತು ತುರ್ತು/ಪ್ರಕೃತಿ ವಿಕೋಪದ ತಯಾರಿ ಕುರಿತು ಸಲಹೆಗಳನ್ನು ನೀಡುವರು.

| ಕ್ರ.ಸಂ | ಕಲಿಕಾಂಶ/ಶೀರ್ಷಿಕೆ | ಕಲಿಕಾ ಪ್ರಕ್ರಿಯೆ | ಸಾಧಿಸಬಹುದಾದ ಕಲಿಕಾ ಫಲ |
|---|---|---|---|
| 1. | ಆಹಾರ ಮತ್ತು ಪೌಷ್ಠಿಕಾಂಶಗಳು | * ಸಸ್ಯಮೂಲ ಮತ್ತು ಪ್ರಾಣಿ ಮೂಲ ಆಹಾರ ಪದಾರ್ಥಗಳನ್ನು ಮಕ್ಕಳಿಂದ ಪಟ್ಟಿ ಮಾಡಿಸುವುದು.<br>* 5ನೇ ತರಗತಿಯ ಪಾಠ: 9 'ಆಹಾರ–ಜೀವದ ಜೀವಾಳ' ಪಾಠದ ಎಲ್ಲಾ ಚಟುವಟಿಕೆಗಳನ್ನು ಮಾಡಿಸುವುದು.<br>* ಮಗು ಪ್ರತಿನಿತ್ಯ ಸೇವಿಸುವ ಆಹಾರ ಪದಾರ್ಥಗಳನ್ನು ಪಟ್ಟಿ ಮಾಡಿಸಿ ಅದರಲ್ಲಿನ ಪೋಷಕಾಂಶಗಳನ್ನು ಮಗುವಿಗೆ ತಿಳಿಸುವುದು.<br>ಪಟ್ಟಿ ಮಾಡಿದ ಆಹಾರ ಪದಾರ್ಥಗಳನ್ನು ಸಸ್ಯಮೂಲ ಮತ್ತು ಪ್ರಾಣಿ ಮೂಲ ಆಹಾರ ಪದಾರ್ಥಗಳಾಗಿ ವಿಂಗಡಿಸಲು ತಿಳಿಸುವುದು.<br>* ಸಿರಿಧ್ಯಾನಗಳ ಉಪಯೋಗವನ್ನು ಮಕ್ಕಳಿಗೆ ತಿಳಿಸಿ, ಪಟ್ಟಿ ಮಾಡಿಸುವುದು.<br>* ಕಾಲಗಳಿಗನುಗುಣವಾಗಿ ನಾವು ಸೇವಿಸುವ ಆಹಾರ ಪದಾರ್ಥಗಳನ್ನು ಪಟ್ಟಿ ಮಾಡಿಸುವುದು. (ಮಳೆಗಾಲ, ಚಳಿಗಾಲ ಮತ್ತು ಬೇಸಿಗೆಕಾಲ)<br>* ಜಂಕ್ ಪುಡ್, ಶೀತಕ ಯಂತ್ರದಲ್ಲಿಟ್ಟ ಆಹಾರಗಳು ಆರೋಗ್ಯಕ್ಕೆ ಒಳ್ಳೆಯದಲ್ಲವೆಂಬುದನ್ನು ಮಕ್ಕಳಿಗೆ ಮನವರಿಕೆ ಮಾಡಿಸುವುದು.<br>* ಆಹಾರ ಪೋಲು ಮಾಡದಂತೆ ಕಾಪಾಡುವುದು ನಮ್ಮೆಲ್ಲರ ಕರ್ತವ್ಯವೆಂಬುದನ್ನು ಮಕ್ಕಳಿಗೆ ಅರ್ಥೈಸುವುದು. | ವಿವಿಧ ಆಹಾರ ಮತ್ತು ಪೌಷ್ಠಿಕಾಂಶಗಳ ಮೂಲಗಳನ್ನು ತಿಳಿಯುವರು |
| 2. | ಸಜೀವ ಮತ್ತು ನಿರ್ಜೀವ ವಸ್ತುಗಳು | * ಮಗುವಿಗೆ ತನ್ನ ಸುತ್ತಮುತ್ತಲಿರುವ ವಸ್ತುಗಳನ್ನು ಪಟ್ಟಿ ಮಾಡಲು ತಿಳಿಸುವುದು.<br>* ಸುತ್ತಮುತ್ತಲಿರುವ ವಸ್ತುಗಳಲ್ಲಿ ಸಜೀವ ಮತ್ತು ನಿರ್ಜೀವ ವಸ್ತುಗಳನ್ನು ಪ್ರತ್ಯೇಕಿಸಿ ಅದರ ಗುಣ ವಿಶೇಷತೆಗಳನ್ನು ಮಕ್ಕಳಿಂದ ಹೇಳಿಸುವುದು.<br>* ಪ್ರಾಣಿ ಮತ್ತು ಸಸ್ಯಗಳು ಒಂದಕ್ಕೊಂದು ಅವಲಂಬಿತವಾಗಿದೆ ಎಂಬುವುದನ್ನು ಆಹಾರ ಕ್ರಮದಿಂದ ಮಕ್ಕಳಿಗೆ ಅರ್ಥೈಸುವುದು.<br>* ಪ್ರಾಣಿಗಳ ಮತ್ತು ಸಸ್ಯಗಳಿಗೆ ಬೇಕಾಗಿರುವ ಆಹಾರದ ಬಗ್ಗೆ ತಿಳಿಸುವುದು.<br>* ವಂಶಾಭಿವೃದ್ಧಿ ಪ್ರಕ್ರಿಯೆಯಲ್ಲಿ ಒಂದನ್ನೊಂದು ಅವಲಂಬಿತವಾಗಿದೆ ಎನ್ನುವುದನ್ನು ಅನೇಕ ಉದಾಹರಣೆಗಳಿಂದ ವಿವರಿಸುವುದು. | ಸಜೀವ ಮತ್ತು ನಿರ್ಜೀವ ವಸ್ತುಗಳ ಗುಣಗಳನ್ನು ಅರ್ಥಮಾಡಿಕೊಳ್ಳುವರು ಹಾಗೂ ಪ್ರಾಣಿ ಮತ್ತು ಸಸ್ಯಗಳಲ್ಲಿನ ಪರಸ್ಪರ ಅವಲಂಬನೆಯನ್ನು ಪ್ರಶಂಸಿಸುವರು |

| | | | |
|---|---|---|---|
| 3. | ಪರಿಸರದೆಡೆಗೆ ಆಸಕ್ತಿ ಸಂಪನ್ಮೂಲ ರಕ್ಷಣೆ ತಾಜ್ಯ ನಿರ್ವಹಣೆ ತುರ್ತು/ಪ್ರಕೃತಿ ವಿಕೋಪದ ಬಗ್ಗೆ ಕಾಳಜಿ | * ಮಾನವನ ಬದುಕಿಗೆ ಪರಿಸರದ ಅವಶ್ಯಕತೆಯ ಬಗ್ಗೆ ತಿಳಿಸುವುದು.<br>* ಪರಿಸರ ಸಂರಕ್ಷಣೆಯನ್ನು ನಾವು ಹೇಗೆ ಮಾಡಬಹುದೆಂದು ವಿಷಯ ಸಂಗ್ರಹಿಸಲು ಮಕ್ಕಳಿಗೆ ನೆರವಾಗುವುದು.<br>* ತಾಜ್ಯ ನಿರ್ವಹಣೆ ಮತ್ತು ಸ್ವಚ್ಛತೆ ಬಗ್ಗೆ ಪ್ರಹಸನ ಮಾಡಿಸುವುದು.<br>* 4ನೇ ತರಗತಿಯ ಪರಿಸರ ಅಧ್ಯಯನದ 103ನೇ ಪುಟ ಓದಿ ತಿಳಿಯಲು ಹೇಳುವುದು ಹಾಗು 105 ಪುಟದ ಚಟುವಟಿಕೆ ಮಾಡಲು ಹೇಳುವುದು.<br>* ಭೂ ಕುಸಿತ, ಪ್ರವಾಹ, ಪ್ರಕೃತಿ ವಿಕೋಪದಂತಹ ಸನ್ನಿವೇಶಗಳ ಚಿತ್ರ ಸಂಗ್ರಹಿಸಲು ವಿದ್ಯಾರ್ಥಿಗಳಿಗೆ ಪ್ರೇರೇಪಿಸುವುದು. ಮೇಲಿನ ಸನ್ನಿವೇಶಗಳ ವೀಡಿಯೋ ತೋರಿಸುವುದು.<br>* ಮೇಲಿನ ಸನ್ನಿವೇಶಗಳು ಎದುರಾದಾಗ ಜನ ಸಾಮಾನ್ಯರು ವಹಿಸಬೇಕಾದ ಎಚ್ಚರಿಕೆ, ಸರಕಾರ ಕೈಗೊಳ್ಳುವ ಕ್ರಮ, ಸಾರ್ವಜನಿಕರು ಪರಸ್ಪರ ಸಹಕರಿಸುವ ವಿಷಯ ತಿಳಿಸುವುದು.<br>* ಊರಿನಲ್ಲಿ ಪ್ರವಾಹದಂತಹ ಪ್ರಕೃತಿ ವಿಕೋಪ ಸಂಭವಿಸಿದಾಗ ಕೈಗೊಳ್ಳುವ ಕ್ರಮಗಳ ಬಗ್ಗೆ ಯೋಜನೆ ತಯಾರಿಸಲು ಮಕ್ಕಳಿಗೆ ಸಹಕರಿಸುವುದು. | ಪರಿಸರದೆಡೆಗೆ ಸೂಕ್ಷ್ಮತೆಯನ್ನು ತೋರುವರು ಮತ್ತು ಸಂಪನ್ಮೂಲಗಳ ರಕ್ಷಣೆ, ತ್ಯಾಜ್ಯನಿರ್ವಹಣೆ ಮತ್ತು ತುರ್ತು/ಪ್ರಕೃತಿ ವಿಕೋಪದ ತಯಾರಿ ಕುರಿತು ಸಲಹೆಗಳನ್ನು ನೀಡುವರು |
| 4. | ಈಗಿನ ಮತ್ತು ಹಿಂದಿನ ಆಚಾರ/ಸಂಪ್ರದಾಯ, ಜೀವನಗಳ ನಡುವೆ ಇರುವ ವ್ಯತ್ಯಾಸ ತಿಳಿದುಕೊಳ್ಳಲು ಆಸಕ್ತಿ ಬೆಳೆಸುವಿಕೆ. | * ಹಿಂದೆ ನಮ್ಮ ಮನೆಗಳಲ್ಲಿ ಇದ್ದ ಆಚಾರ(ದಿನನಿತ್ಯ/ಹಬ್ಬದ ದಿನಗಳ)ಗಳನ್ನು ಕುಟುಂಬದ ಹಿರಿಯರಿಂದ ತಿಳಿದು, ತರಗತಿಯಲ್ಲಿ ಹೇಳಲು ಮಕ್ಕಳಿಗೆ ಅವಕಾಶ ನೀಡುವುದು.<br>* ವಿದ್ಯಾರ್ಥಿಗಳಿಂದ ಅವರ ಕುಟುಂಬದ ಈಗಿನ ಆಚರಣೆಗಳು/ ಆಚಾರ ಕ್ರಮಗಳ ಬಗ್ಗೆ ಹೇಳಿಸುವುದು.<br>* ಹಿಂದೆ ನಮ್ಮ ಮನೆಗಳಲ್ಲಿ ಇದ್ದ ಸಂಪ್ರದಾಯಗಳನ್ನು ತಿಳಿಸುವುದು.<br>* ಸಂಪ್ರದಾಯಗಳು ಇಂದು ಏಕೆ ಬದಲಾದವು ಎಂದು ಮಕ್ಕಳಿಗೆ ವಿವರಿಸುವುದು.<br>* ಹಿಂದೆ ಬಳಸುತ್ತಿದ್ದ ಪಾತ್ರೆಗಳ ಬಗ್ಗೆ ಹೇಳುವುದು. ವಿದ್ಯಾರ್ಥಿಗಳ ಮನೆಯಲ್ಲಿ ಇಂದು ಬಳಸುತ್ತಿರುವ ಪಾತ್ರೆ ಪರಿಕರಗಳ ಬಗ್ಗೆ ಹೇಳಿಸಿ ಬರೆಸುವುದು.<br>* ಹಿಂದಿನ ಕಾಲದಲ್ಲಿ ಬಳಸುತ್ತಿದ್ದ ಸಾರಿಗೆ ಸಾಧನಗಳ ಚಿತ್ರಪಟ ತೋರಿಸುವುದು.<br>* ಇಂದಿನ ಕಾಲದ ಸಾರಿಗೆ ಸಾಧನಗಳ ಚಿತ್ರ ಸಂಗ್ರಹಿಸಲು ವಿದ್ಯಾರ್ಥಿಗಳಿಗೆ ಹೇಳಿಸುವುದು.<br>* ಸಾರಿಗೆ ಸಾಧನಗಳ ಬಳಕೆಯಲ್ಲಿ ಆದ ಬದಲಾವಣೆಗೆ ಕಾರಣಗಳನ್ನು ತಿಳಿಸುವುದು.<br>* ನಗರ ಮತ್ತು ಗ್ರಾಮದ ಜನರ ಜೀವನ ಕ್ರಮಕ್ಕೆ ಸಂಬಂಧಿಸಿದ ವೀಡಿಯೋ ತುಣುಕುಗಳನ್ನು ತೋರಿಸುವುದು.<br>* ವೃತ್ತಿ/ಸಮೂಹ ಮಾಧ್ಯಮ/ ಮನರಂಜನಾ ವಿಧಾನಗಳು/ಹಬ್ಬಗಳು/ಉಡುಪುಗಳು ಇತ್ಯಾದಿಗಳು ಹಿಂದೆ ಮತ್ತು ಈಗ ಹೇಗಿವೆ ಎಂಬುದನ್ನು ಚಿತ್ರಗಳು/ವಿಡಿಯೋಗಳ ಮೂಲಕ ಪ್ರದರ್ಶಿಸಿ, ಮಕ್ಕಳೊಂದಿಗೆ ಚರ್ಚಿಸಿ, ವ್ಯತ್ಯಾಸಗಳನ್ನು ಗುರುತಿಸುವಂತೆ ಮಾಡುವುದು. | ಈಗಿನ ಮತ್ತು ಹಿಂದಿನ ಆಚಾರಗಳು/ಸಂಪ್ರದಾಯಗಳು/ಜೀವನಗಳ ನಡುವೆ ಇರುವ ವ್ಯತ್ಯಾಸವನ್ನು ತಿಳಿಯುವರು |
| 5. | ಭಾರತದ ಹಿಂದಿನ ವಿಷಯಗಳನ್ನು ತಿಳಿಯಲು ಕುತೂಹಲ | * ಪ್ರೇಕ್ಷಣೀಯ ಸ್ಥಳಗಳಿಗೆ ನಾವು ಭೇಟಿ ನೀಡುವುದರ ಪ್ರಯೋಜನ ಹೇಳಿಕೊಡುವುದು. 4ನೇ ತರಗತಿಯ ಪರಿಸರ ಅಧ್ಯಯನ ಪಠ್ಯಪುಸ್ತಕದ ಪುಟಸಂಖ್ಯೆ: 230,231, 232 ನೋಡಿ ಓದಿ ಹಾಗು 233ನೇ ಪುಟದ ಚಟುವಟಿಕೆ ಮಾಡಲು ಹೇಳುವುದು. | ಗತಭಾರತದ ವಿಷಯಗಳನ್ನು ತಿಳಿಯಲು ಕುತೂಹಲ ಹೆಚ್ಚಿಸಿಕೊಳ್ಳುವರು |

| | | | |
|---|---|---|---|
| | | * ಹಿಂದೆ ಭಾರತವನ್ನು ಆಳುತ್ತಿದ್ದ ರಾಜರುಗಳ ಆಡಳಿತ ಕ್ರಮ, ಜನಜೀವನದ ಬಗ್ಗೆ ಚಿತ್ರಪಟ/ವೀಡಿಯೋ ಮೂಲಕ ಕಿರುಪರಿಚಯ ಮಾಡುವುದು.<br>* ಭಾರತ ದೇಶದ ಭವ್ಯ ಪರಂಪರೆಯ ಕಿರು ಪರಿಚಯದೊಂದಿಗೆ ಭಾರತ ದೇಶದ ಸ್ವಾತಂತ್ರ್ಯ ಹೋರಾಟದ ಬಗ್ಗೆ ತಿಳಿಸುವುದು.<br>* ಸ್ವಾತಂತ್ರ್ಯ ಹೋರಾಟಗಾರರ/ ರಾಷ್ಟ್ರ ನಾಯಕರ ಚಿತ್ರ ಸಂಗ್ರಹಿಸಲು ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸುವುದು.<br>* ಭಾರತದ ಕೆಲವು ಐತಿಹಾಸಿಕ ಸ್ಥಳಗಳು/ಪ್ರಸಿದ್ಧ ರಾಜರು/ ಸ್ಮಾರಕಗಳು ಇತ್ಯಾದಿಗಳ ಕೆಲವು ಚಿತ್ರಗಳನ್ನು ವೀಡಿಯೋ ಬಳಸಿ ತೋರಿಸುವುದು ಮತ್ತು ಅವುಗಳ ಬಗ್ಗೆ ಮಾಹಿತಿ ನೀಡುವುದು. | |